# ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 43
೨೪ ಆಗಸ್ಟ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

# ರಾಜ್ಯಾಂಗದ ಅಕ್ಷರಶಃ ಆಡಳಿತೆ ಕೇರಳದಲ್ಲಿದೆ

## ಕೇಂದ್ರದ ಹಸ್ತಕ್ಷೇಪ ಭಾರತದ ಪ್ರಜಾಪ್ರಭುತ್ವ ಪದ್ಧತಿಯ ಬೆಳವಣಿಗೆಗೇ ಮಾರಕವಾದೀತು

### ಮುಖ್ಯ ಮಂತ್ರಿ ಇ. ಎಂ. ಎಸ್.ರ ಧೀರ ಘೋಷಣೆ

**"ಕೇರಳದಲ್ಲಿ ಕಮ್ಯೂನಿಸ್ಟ್ ಪಾರ್ಟಿ ವಿರುದ್ಧ ಕಾಂಗ್ರೆಸ್ ನಾಯಕರು ಅರಾಜಕತೆ ಮುಂತಾದ ಆರೋಪಗಳನ್ನು ಸೃಷ್ಟಿಸಿದುದನ್ನೇ ಕೇಂದ್ರವೂ ಪುನರುಚ್ಚರಿಸುತ್ತಿದೆ. ಕಮ್ಯೂನಿಸ್ಟ್ ಮಂತ್ರಿ ಮಂಡಳವು ರಾಜ್ಯಾಂಗದ ಚೌಕಟ್ಟಿನಲ್ಲಿಷ್ಟೇ ಅಲ್ಲ, ಅಕ್ಷರಶಃ ಅದರಂತೆಯೇ ಆಡಳಿತ ವ್ಯವಸ್ಥೆಯನ್ನು ನಡೆಸಿದೆಯೆಂದು ಮತ್ತೆ ಮತ್ತೆ ಘೋಷಿಸುತ್ತೇನೆ. ಕೇಂದ್ರವೇನಾದರೂ ಬೇರೆ ಯಾವದಾದರೂ ರಾಜ್ಯ ಮತ್ತು ಕೇರಳ ಇವುಗಳ ಬಗ್ಗೆ ವ್ಯತ್ಯಾಸವೆಣಿಸ ತೊಡಗಿದರೆ ಅದು ಭಾರತದಲ್ಲಿ ಆರೋಗ್ಯಕಾರಿಯಾದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಖಂಡಿತವಾಗಿಯೂ ತೀವ್ರವಾದ ಅಪಾಯವನ್ನೆಸಗುವುದರಲ್ಲಿ ಸಂದೇಹವಿಲ್ಲ."**

ಎಂಬುದಾಗಿ ಕೇರಳದ ಮುಖ್ಯಮಂತ್ರಿ ಶ್ರೀ ಇ. ಎಂ. ಎಸ್. ನಂಬೂದಿರಿಪಾದ್ ಅವರು ತ್ರಿಚೂರಿನಲ್ಲಿ ತಾ|| 17-8-58 ರಂದು ಭಾರೀ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತ ಕೇಂದ್ರದ ಹಸ್ತಕ್ಷೇಪ ನೀತಿಯ ಬಗ್ಗೆ ಸ್ಪಷ್ಟವಾಗಿ ಹೇಳಿದರು.

ಆರೋಗ್ಯಕಾರಿಯಾದ ಟೀಕೆಗಳನ್ನು ಕಾನೂನುಬದ್ಧ ಜನಪ್ರಿಯ ಹೋರಾಟಗಳನ್ನು ಮುಖ್ಯಮಂತ್ರಿಗಳು ಸ್ವಾಗತಿಸುತ್ತ "ವಿರೋಧಿಗಳ ಆಹ್ವಾನಗಳನ್ನೆಲ್ಲ ಸ್ವೀಕರಿಸಲು ನಾವು ಸಿದ್ಧರಿದ್ದೇವೆ" ಎಂದೂ ಹೇಳಿದರು.

"ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಜನರಿಂದ ಚುನಾಯಿಸಲ್ಪಟ್ಟ ಸರ್ಕಾರವು ಶಾಸನ ಸಭೆಯ ಬಹುಮತವನ್ನು ಪಡೆದಿದ್ದರೆ ಕೊನೆಯ ಪಕ್ಷ ಮುಂದಿನ ಚುನಾವಣೆಯುವರೆಗಾದರೂ ರಾಜ್ಯ ಕಾರಭಾರ ನಡೆಸಲು ವಿರೋಧಿ ಪಕ್ಷಗಳು ಅವಕಾಶ ಕೊಡಬೇಕಾದುದು ಮೂಲಭೂತ ಹಕ್ಕು ಆಗಿದೆ." ಎಂದು ಹೇಳಿದ ಮುಖ್ಯಮಂತ್ರಿಗಳು "ಯಾಕೆಂದರೆ ಅಧಿಕಾರದ ಕ್ಷುಧೆಯಿಂದ ಕಾಂಗ್ರೆಸ್ಸು ಮತ್ತು ಬೇರೆ ಪ್ರತಿಪಕ್ಷಗಳು ಸಾಧ್ಯವಿದ್ದ ದಾರಿಯಿಂದೆಲ್ಲ ರಾಜ್ಯಾಂಗಬದ್ಧವಾಗಿ ಬಂದ ಸರಕಾರವನ್ನುರುಳಿಸಲು ಪ್ರಯತ್ನಿಸುತ್ತಿವೆ" ಎಂದೂ ಅವರು ಮುಂದೊರೆದು ಹೀಗೆ ಹೇಳಿದರು:

"ನಾವು, ಔದ್ಯೋಗಿಕ ಸಂಬಂಧಗಳ ಒಳಿತಿಗಾಗಿ ಮತ್ತು ರೈತರ ಒಳಿತಿಗಾಗಿ, ಕಾನೂನುಗಳನ್ನು ಜಾರಿಗೆ ತರುತ್ತಿದ್ದೇವೆ, ಪಂಚಾಯಿತಿಗಳಿಗೂ, ಸ್ಥಳೀಯ ಸಂಸ್ಥೆಗಳಿಗೂ ಹೆಚ್ಚು ಅಧಿಕಾರ ಕೊಡುತ್ತಿದ್ದೇವೆ. ರಾಜ್ಯದಲ್ಲಿ ಶಿಕ್ಷಣದ ಮಟ್ಟವನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ಯೊಂದು ಪ್ರಗತಿಪರ ಕ್ರಮಗಳಿಗೆ ಬೆಂಬಲ ನೀಡುವುದು ಜನತೆಯ ಕರ್ತವ್ಯವಾಗಿದೆ.

"ಕಾಂಗ್ರೆಸ್ ಆಳುತ್ತಿರುವ ಬೇರೆ ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಕೇರಳದಲ್ಲಿ ಕಾಂಗ್ರೆಸು ಮತ್ತು ವಿರೋಧ ಪಕ್ಷಗಳು ಅನುಸರಿಸುತ್ತಿರುವ ನೀತಿಯನ್ನೆಂದೂ ಅನುಸರಿಸುತ್ತಿಲ್ಲ. ಅಲ್ಲೆಲ್ಲ ಮಂತ್ರಿಮಂಡಳಗಳನ್ನು ಪದಚ್ಯುತಗೊಳಿಸಲು ಶಾಸನಬದ್ಧ ಕ್ರಮಗಳನ್ನು ನಡೆಸಲಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ವಿರೋಧ ಪಕ್ಷಗಳಿಂದ ಯಾವ ಪ್ರಯಾಸದ ಪ್ರಯತ್ನಗಳೂ ನಡೆದಿಲ್ಲ. ಆದರೆ ಕೇರಳದಲ್ಲಿ ಮಾತ್ರ ಪರಿಸ್ಥಿತಿ ವಿಪರೀತವಾಗಿದೆ.

"ಸಚಿವ ಸಂಪುಟವನ್ನುರುಳಿಸಲು ವಿರೋಧಿ ಪಕ್ಷಗಳು ಅವಿಶ್ವಾಸ ಗೊತ್ತುವಳಿ ಅಥವಾ ಇನ್ನಿತರ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಪದ್ಧತಿಯ ಕ್ರಮಗಳನ್ನು ಕೈಕೊಳ್ಳಬೇಕು. ಬಹುಮತವನ್ನು ನಾವು ಕಳೆದುಕೊಂಡರೆ ಅಧಿಕಾರವನ್ನು ಬಿಟ್ಟುಕೊಡುತ್ತೇವೆ. ನಮ್ಮ ಶಾಸನ ಸಭೆಯ ಪಕ್ಷದಲ್ಲೇನಾದರೂ ನಮ್ಮ ಬಗ್ಗೆ ಅಸಮ್ಮತಿಯಿದ್ದರೆ ನೀವು ನಮ್ಮನ್ನು ಹೊರತಳ್ಳಬಹುದು.

"ಇತ್ತೀಚೆಗೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಮೂವರ ಪ್ರತಿನಿಧಿ ಮಂಡಳವು ದೆಹಲಿಗೆ ತೆರಳಿ ಅವರಲ್ಲೊಬ್ಬರು ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬೇಕಾಗಿಲ್ಲವೆಂದು ಹೇಳಿದರು. ಅಂದರೆ ಇವರಿಗೆ ಹೇಗಾದರೂ ಮಾಡಿ ಯಾವದೇ ರೂಪದಲ್ಲಿ ಕೇಂದ್ರವು ಕೇರಳದಲ್ಲಿ ಹಸ್ತಕ್ಷೇಪ ಮಾಡುವುದು ಬೇಕಾಗಿದೆ ಎಂದು ಸ್ಪಷ್ಟವಾಗುತ್ತದೆ.

"ಕಮ್ಯೂನಿಸ್ಟ್ ಸರ್ಕಾರ ಕೇರಳದಲ್ಲಿ ಅಧಿಕಾರ ವಹಿಸಿಕೊಂಡಂದಿನಿಂದ ಕಾಂಗ್ರೆ

(ಕೊನೇ ಪುಟ ನೋಡಿ)

## ಶ್ರದ್ಧಾಂಜಲಿ



## ಪ್ರೊಫೆಸರ್ ಜೋಲಿಯೋ ಕ್ಯೂರಿ

ವಿಶ್ವ ವಿಖ್ಯಾತ ವಿಜ್ಞಾನಿಗಳೂ ವಿಶ್ವ ಶಾಂತಿ ಪರಿಷತ್ತಿನ ಅಧ್ಯಕ್ಷರೂ ಆಗಿದ್ದ ಪ್ರೊಫೆಸರ್ ಜೋಲಿಯೋ ಕ್ಯೂರಿಯವರು ಪ್ಯಾರಿಸ್ ನಗರದ ಆಸ್ಪತ್ರೆಯಲ್ಲಿ ಆಗಸ್ಟ್ 14ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಜೋಲಿಯೋ ಕ್ಯೂರಿಯವರು ರಕ್ತಸ್ರಾವದಿಂದ ನರಳಿ ನಿಧನರಾದರು. ಅವರಿಗೆ 58 ವಯಸ್ಸಾಗಿತ್ತು. ಎರಡು ವರ್ಷಗಳ ಹಿಂದೆ ಅವರ ಪತ್ನಿ ಐರೀನ್ ಕ್ಯೂರಿಯವರು ನಿಧನರಾದರು. ಜೋಲಿಯೋ ಕ್ಯೂರಿ ಮತ್ತು ಐರೀನ್ ಕ್ಯೂರಿಯವರು ಜೊತೆಯಾಗಿ ಬೀಜಾಣು ಭೌತಶಾಸ್ತ್ರ ಸಂಶೋಧನೆಯಲ್ಲಿ ಮಾಡಿದ ಮಹತ್ತರ ಕಾಣಿಕೆಗಾಗಿ 1935 ರಲ್ಲಿ ರಸಾಯನ ಶಾಸ್ತ್ರದ ನೋಬೆಲ್ ಪಾರಿತೋಷಕ ದೊರೆಯಿತು. ವಿಖ್ಯಾತ ವಿಜ್ಞಾನಿಗಳಾಗಿದ್ದ ಪಿಯರಿ ಮತ್ತು ಮಾಡಮ್ ಕ್ಯೂರಿಯವರ ಮಾರ್ಗವನ್ನೇ ಇವರು ಅನುಸರಿಸಿದ್ದರು.

ಜೋಲಿಯೋ ಕ್ಯೂರಿ ಮಹಾ ವಿಜ್ಞಾನಿಯಷ್ಟೇ ಅಲ್ಲ, ಅವರು ಅಪ್ರತಿಮ ದೇಶಾಭಿಮಾನಿಗಳೂ ಆಗಿದ್ದರು. ಫಾಜಿಜಂನ ಕಾರ್ಮೋಡ ಕವಿದು, ದ್ವಿತೀಯ ಮಹಾಯುದ್ಧ ಕಾಲದಲ್ಲಿ ಫ್ರಾನ್ಸ್ ನಾಜಿ ಪಡೆಗಳಿಂದ ಆಕ್ರಮಿತವಾಗಿದ್ದಾಗ, ಪ್ರತಿಭಟನಾ ಹೋರಾಟ ಕಾಲದಲ್ಲಿ ಜೋಲಿಯೋ ಕ್ಯೂರಿ ಪ್ರಮುಖ ಪಾತ್ರ ವಹಿಸಿದ್ದರು. ತಮ್ಮ ಹಾಗೂ ಕುಟುಂಬಕ್ಕೆ ಆಪತ್ತೊದಗುವ ಸಂಭವವಿದ್ದರೂ ಲೆಕ್ಕಿಸದೆ ಅಣುಬಾಂಬಿನ ತಯಾರಿಕೆ ಮತ್ತು ಪರಿಪೂರ್ಣತೆಗೆ ಅನುಕೂಲವಾಗಿದ್ದ ಭಾರ ಜಲವನ್ನು ಲಂಡನ್ನಿಗೆ ಸಾಗಿಸಿ, ಜರ್ಮನರ ಕೈಗೆ ಸಿಗದಂತೆ ಮಾಡಿದರು.

ಯುದ್ಧಾನಂತರದಲ್ಲಿ ಅವರು ಫ್ರೆಂಚ್ ಅಣುಶಕ್ತಿ ಆಯೋಗದ ನೇತೃತ್ವ ವಹಿಸಿದರು. ಆದರೆ ಅಣುಬಾಂಬಿನ ವಿನಾಶಕಾರಕ ಪರಿಣಾಮವನ್ನು ಅರಿತು, ಅವರು ವಿಶ್ವಶಾಂತಿ ಚಳವಳಿಯಲ್ಲಿ, ಸಂಪೂರ್ಣ ನಿಶ್ಶಸ್ತ್ರೀಕರಣಕ್ಕಾಗಿ ಅಣುಶಸ್ತ್ರಗಳ ನಿಷೇಧಕ್ಕಾಗಿ ತಮ್ಮ ಕಾರ್ಯವನ್ನು ಆರಂಭಿಸಿದರು. ವಿಶ್ವಶಾಂತಿ ಚಳವಳಿಯ ಅಧ್ಯಕ್ಷಸ್ಥಾನದಲ್ಲಿದ್ದುಕೊಂಡು, ಶಾಂತಿ ಚಳವಳಿಯನ್ನು ಬಲಗೊಳಿಸಲು ಸತತವಾಗಿ ದುಡಿದರು. ವಿಶ್ವಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಅವರು ಸಲ್ಲಿಸಿದ ಅಪಾರ ಸೇವೆಯ ಗೌರವಾರ್ಥವಾಗಿ ಸ್ಟಾಲಿನ್ ಶಾಂತಿ ಪಾರಿತೋಷಿಕವನ್ನು ಪಡೆದರು. ವಿಶ್ವದಲ್ಲಿ ಅಣುಶಸ್ತ್ರಗಳ ವಿರೋಧವಾಗಿ ಅಂತರ ರಾಷ್ಟ್ರೀಯ ಜಾಗೃತಿಯನ್ನು ಉಂಟುಮಾಡಿದ ವಿಜ್ಞಾನಿಗಳಲ್ಲಿ ಇವರೇ ಮೊದಲಿಗರಾಗಿದ್ದರು. ಇದರಿಂದಾಗಿ ಅವರು ಫ್ರೆಂಚ್ ಸರಕಾರದ ಮತ್ತು ನ್ಯಾಟೋ ಕೂಟದ ಸರಕಾರಗಳ ವಿರೋಧವನ್ನೆದುರಿಸಬೇಕಾಯಿತು, ಫ್ರೆಂಚ್ ಅಣುಶಕ್ತಿ ಆಯೋಗದ ಅಧ್ಯಕ್ಷಸ್ಥಾನ ಕಳೆದುಕೊಳ್ಳಬೇಕಾಯಿತು.

ಆದರೆ ಅವರು ಇದಾವುದನ್ನೂ ಲೆಕ್ಕಿಸದೆ ಅವರು ವಿಶ್ವಶಾಂತಿಗಾಗಿ ದುಡಿದರು. ವಿಶ್ವಶಾಂತಿ ಚಳವಳಿಯಲ್ಲಿ ಕ್ಯೂರಿಯವರು ಮಹಾ ವ್ಯಕ್ತಿಯಾಗಿದ್ದರು. ವ್ಯಕ್ತಿಯ ಜೀವನವು ಬಹಳ ಅಲ್ಪ ಕಾಲದ್ದು, ಇಂದಿನ ಪರಿಸ್ಥಿತಿಯಲ್ಲಿ ನಾನು ಪ್ರಯೋಗಶಾಲೆಯನ್ನು ಬಿಟ್ಟು ಹೊರಬಂದು ಶಾಂತಿ ಹೋರಾಟದಲ್ಲಿ ಭಾಗವಹಿಸುವುದು ಅಗತ್ಯವೆಂದು ಹೇಳುತ್ತೇನೆ, ಶಾಂತಿಯಿಲ್ಲದಿದ್ದಲ್ಲಿ ಯಾವ ವೈಜ್ಞಾನಿಕ ಬೆಳವಣಿಗೆಯೂ ಸಾಧ್ಯವಿಲ್ಲ ಎಂದು ತಿಳಿಸಿದ್ದರು.

ಮಾರ್ಕ್ಸ್‌ವಾದವನ್ನನುಸರಿಸಿ ಅವರು ಫ್ರೆಂಚ್ ಕಮ್ಯೂನಿಸ್ಟ್ ಪಕ್ಷವನ್ನ ಸೇರಿದರು. ಫ್ರೆಂಚ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿದ್ದರು.

ಫ್ರೆಂಚ್ ಸರಕಾರವು ಜೋಲಿಯೋ ಕ್ಯೂರಿಯವರಿಗೆ ಸಕಲ ಗೌರವದೊಡನೆ ರಾಷ್ಟ್ರೀಯ ಶವಸಂಸ್ಕಾರ ನೀಡಿರುವುದು ಸೂಕ್ತವಾದುದಾಗಿದೆ. ಇದು ಕ್ಯೂರಿಯವರ ಹಿರಿಮೆಯನ್ನು ತೋರಿಸುತ್ತದೆ.

ಜೋಲಿಯೋ ಕ್ಯೂರಿಯವರ ನಿಧನದಿಂದಾಗಿ ವಿಶ್ವಶಾಂತಿ ಚಳವಳಿಗಷ್ಟೇ ಅಲ್ಲದೆ ವಿಶ್ವದ ಶಾಂತಿ ಪ್ರೇಮಿ ಶಕ್ತಿಗಳಿಗೂ, ಕಾರ್ಮಿಕ ವರ್ಗಕ್ಕೂ ಅಪಾರವಾದ ನಷ್ಟವಾಗಿದೆ. ಅವರ ನಿಧನಕ್ಕಾಗಿ 'ಜನಶಕ್ತಿ' ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಸಂಪಾದಕೀಯ

# ಅಹಮದಾಬಾದ್ ಘಟನೆಗಳಿಗೆ ಸರಕಾರದ ಅನೀತಿಯೇ ಕಾರಣ

ಕಾಂಗ್ರೆಸ್ಸಿನ ಪ್ರಭಾವಯುತ ಕೇಂದ್ರವೆನಿಸಿರುವ ಗುಜರಾತ್ ಪ್ರದೇಶದ ಅಹಮದಾಬಾದ್ ನಗರದಲ್ಲಿ ಕಳೆದೊಂದು ವಾರದಲ್ಲಿ ತೀವ್ರ ಘಟನೆಗಳು ನಡೆದಿವೆ. ಪೋಲೀಸರು ಹಲವಾರು ಕಡೆಗಳಲ್ಲಿ ತೀವ್ರವಾಗಿ ಲಾಠಿ ಚಾರ್ಜು ನಡೆಸಿರುವುದಲ್ಲದೆ, ಗೋಳೀಬಾರಿನ ಪರಿಣಾಮವಾಗಿ ಇಬ್ಬರ ಮರಣ ಸಂಭವಿಸಿದೆ. ನಗರದಾದ್ಯಂತ ಕರ್ಫ್ಯೂ ಆಜ್ಞೆ ಜಾರಿಯಲ್ಲಿದೆ. ಮಹಾ ಗುಜರಾತ್ ಸಮಿತಿಯ ನಾಯಕರನೇಕರ ಬಂಧನಗಳಾಗಿವೆ. ಈ ಶೋಚನೀಯ ಘಟನೆಗಳಿಗೆ ಸರಕಾರದ ಅನೀತಿಯೇ ಕಾರಣವಾಗಿದೆ.

ರಾಜ್ಯ ಪುನರ್ವಿಂಗಡನೆಯಾಗುವಾಗ್ಗೆ, ಮಹಾರಾಷ್ಟ್ರ—ಗುಜರಾತ್ ಜನತೆಗಾದ ಅನ್ಯಾಯವನ್ನು ಯಾರೂ ಮರೆಯುವಂತಿಲ್ಲ. ಕೇಂದ್ರ ಸರಕಾರವು ಈ ಬಗ್ಗೆ ಮಲತಾಯಿ ಧೋರಣೆ ಅನುಸರಿಸಿ, ಮಹಾರಾಷ್ಟ್ರ—ಗುಜರಾತ್ ಜನತೆಯ ಬೇಡಿಕೆಯನ್ನು ತಿರಸ್ಕರಿಸಿ ದ್ವಿಭಾಷಾ ಮುಂಬಯಿ ರಾಜ್ಯವನ್ನು ಸ್ಥಾಪಿಸಿತು. ಅಂದಿನಿಂದ ಎರಡೂ ಪ್ರದೇಶದ ಜನತೆ ತಮ್ಮ ನ್ಯಾಯವಾದ ಬೇಡಿಕೆಗಾಗಿ ಹೋರಾಟ ನಡೆಸುತ್ತಿವೆ. ಎಲ್ಲ ವಿರೋಧ ಪಕ್ಷಗಳೂ ಒಂದುಗೂಡಿ ಸಂಯುಕ್ತವಾಗಿ ಹೋರಾಡುತ್ತಿವೆ. ಕಳೆದ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಹೆಚ್ಚು ಸಂಖ್ಯೆಯಲ್ಲಿ ಪರಾಜಯಗೊಳಿಸಿ, ಜನತೆ ತಮ್ಮ ತೀರ್ಪನ್ನಿತ್ತಿದ್ದಾರೆ. ಹಾಗಿದ್ದರೂ ಸರಕಾರ ತನ್ನ ನೀತಿಯನ್ನು ಬದಲಿಸದೇ ಇದೆ. ಕಳೆದೆರಡು ವರ್ಷಗಳಲ್ಲಿ ಮಹಾರಾಷ್ಟ್ರ—ಗುಜರಾತುಗಳ ರಚನೆಗಾಗಿ ನಡೆದಿರುವ ಆಂಧೋಳನದಲ್ಲಿ ಹಲವರು ಜೀವ ತೆತ್ತಿದ್ದಾರೆ.

ಸರಕಾರದ ಅನೀತಿಗೆ, ದಬ್ಬಾಳಿಕೆಗೆ ಬಲಿಯಾಗಿ ಅಸುವನ್ನು ನೀಗಿದ ಹುತಾತ್ಮರಿಗೆ ಗೌರವ, ಶ್ರದ್ಧಾಂಜಲಿಯನ್ನು ಅರ್ಪಿಸುವುದು ಸಹಜ ಹಾಗೂ ಸೂಕ್ತ. ಇಂಥ ಹುತಾತ್ಮರ ಗೌರವಾರ್ಥವಾಗಿ ಅಹಮದಾಬಾದ್ ನಗರದ ಚೌಕವೊಂದರಲ್ಲಿ ನಿರ್ಮಿಸಲಾಗಿದ್ದ ಸ್ಮಾರಕವನ್ನು ಸರಕಾರವು ಅಗೌರವ ರೀತ್ಯಾ ಕಿತ್ತುಹಾಕಿದುದು ಕಳೆದ ವಾರದಲ್ಲಿ ನಡೆದಿರುವ ಘಟನೆಗಳಿಗೆ ಕಾರಣವಾಗಿದೆ. ಸರಕಾರ ಈ ಬಗ್ಗೆ ತಳೆದಿರುವ ಧೋರಣೆ ಹಾಗೂ ವರ್ತನೆಯು ಖಂಡನೀಯವಾಗಿದೆ.

ಮುಂಬಯಿಯ ಮುಖ್ಯ ಮಂತ್ರಿ ವೈ. ಬಿ. ಚವ್ಹಾನ್‌ರವರು ಮಾತನಾಡುತ್ತ ಅಹಮದಾಬಾದ್ ನಗರದ ಮುನಿಸಿಪಲ್ ಕಾರ್ಪೊರೇಷನ್ ತೀರ್ಮಾನಿಸಿ ಅನುಮತಿಯಿತ್ತರೂ ಸಹ ಸರಕಾರವು ಅಂಥ ಸ್ಮಾರಕವನ್ನು ನಿರ್ಮಿಸಲು ಎಡೆಗೊಡುವುದಿಲ್ಲವೆಂದು ಹೇಳಿದರೆಂದು ವರದಿಯಾಗಿದೆ. ಮುಖ್ಯ ಮಂತ್ರಿಗಳು ಈ ರೀತಿ ಮಾತನಾಡಿರುವುದು ಉದ್ಧಟತನವಷ್ಟೇ ಅಲ್ಲದೆ, ಮುನಿಸಿಪಲ್ ಆಡಳಿತೆಯ ಬಗ್ಗೆ ಅವರಿಗಿರುವ ತುಚ್ಛ ಮನೋಭಾವವನ್ನು ವ್ಯಕ್ತಗೊಳಿಸುತ್ತದೆ. ಸರಕಾರವು ಈ ರೀತಿಯ ಮನೋಭಾವ ತಳೆದಿರುವುದು ದ್ವೇಷ ಸಾಧನೆಗಾಗಿ ಎಂದು ಭಾಸವಾಗುತ್ತದೆ. ಸರಕಾರ ಈ ಮೊಂಡು ನೀತಿಯನ್ನು ಕೈಬಿಟ್ಟು, ಸಹನೆಯಿಂದ ವರ್ತಿಸಲಿ ಎಂದು ಒತ್ತಾಯ ಪಡಿಸುತ್ತೇವೆ.

ಇತ್ತೀಚೆಗೆ ಅಹಮದಾಬಾದ್ ಮುನಿಸಿಪಲ್ ಕಾರ್ಪೊರೇಷನ್ ಹುತಾತ್ಮರ ಸ್ಮಾರಕ ನಿರ್ಮಾಣಕ್ಕೆ ತನ್ನ ಅನುಮತಿ ನೀಡಿ ನಿರ್ಣಯವೊಂದನ್ನು ಅಂಗೀಕರಿಸಿದೆ. ಸರಕಾರವು ಇದನ್ನು ಅಡ್ಡಿಪಡಿಸುವುದಕ್ಕೆ ಹೋದಲ್ಲಿ, ಪರಿಸ್ಥಿತಿ ಇನ್ನಷ್ಟು ಹದಗೆಡುವುದಷ್ಟೇ ಅಲ್ಲ, ಅದು ಮುನಿಸಿಪಲ್ ಕಾರ್ಪೊರೇಷನ್ನಿನ ಸ್ವಾಯತ್ತತೆಗೇ ಕೊಡಲಿಪೆಟ್ಟು ಕೊಟ್ಟಂತಾಗುತ್ತದೆ.

ನಡೆದಿರುವ ಈ ಘಟನೆಗಳು ಮಹಾರಾಷ್ಟ್ರ ಗುಜರಾತ್‌ಗಳ ರಚನೆಗಾಗಿ ಜನತೆ ನಡೆಸುತ್ತಿರುವ ಹೋರಾಟದ ಅಂಗವಾಗಿದೆ. ಮಹಾರಾಷ್ಟ್ರ ಜನತೆ, ಗುಜರಾತ್ ಜನತೆಯ ಈ ಹೋರಾಟಕ್ಕೆ ತನ್ನ ಬೆಂಬಲವನ್ನು ಸೂಚಿಸಿದೆ. ಕೇಂದ್ರ ಸರಕಾರವು ಜನತೆಯ ನ್ಯಾಯವಾದ ಈ ಹೋರಾಟದ ಬಗ್ಗೆ ಕಣ್ಣು ತೆರೆದು, ಅವರ ಬೇಡಿಕೆಯನ್ನು ಈಡೇರಿಸಲಿ ಎಂದು ಒತ್ತಾಯ ಪಡಿಸುತ್ತೇವೆ. ಅಹಮದಾಬಾದ್‌ನ ಈ ಘಟನೆಗಳಲ್ಲಿ ಪೋಲೀಸರ ದಬ್ಬಾಳಿಕೆಗೆ ಗುರಿಯಾಗಿ ಮೃತರಾದವರಿಗೆ ನಮ್ಮ ಸಂತಾಪವನ್ನು ಸೂಚಿಸುತ್ತೇವೆ, ಹಾಗೂ ಈ ದೌರ್ಜನ್ಯದ ಬಗ್ಗೆ ವಿಚಾರಣೆ ನಡೆಸಬೇಕೆಂದು ಒತ್ತಾಯಪಡಿಸುತ್ತೇವೆ.

ಕೇರಳದಲ್ಲಿ ಚಂದನತೋಪಿನಲ್ಲಿ ಗೋಳಿಬಾರು ನಡೆದನಂತರದಲ್ಲಿ, ಕೇರಳದಲ್ಲಿ ಅರಾಜಕತೆ ಉಂಟಾಗಿದೆ, ನ್ಯಾಯ ಮತ್ತು ಶಿಸ್ತು ಪರಿಪಾಲನೆಯಾಗುತ್ತಿಲ್ಲ ಎಂದು ಬೊಬ್ಬೆಹಾಕಿದ ಕಾಂಗ್ರೆಸ್ ನಾಯಕರು ಅಹಮದಾಬಾದ್ ಘಟನೆಗಳ ಬಗ್ಗೆ ಏನು ಹೇಳುತ್ತಾರೆ?

ವಾರದ ವಿಶ್ವ ಸಮೀಕ್ಷೆ

## ಅಹಮದಾಬಾದ್‌ನಲ್ಲಿ ದಬ್ಬಾಳಿಕೆ

ಮಹಾ ಗುಜರಾತ್ ಸ್ಥಾಪನೆಗಾಗಿ ನಡೆಯುತ್ತಿರುವ ಹೋರಾಟಗಳಲ್ಲಿ ಪೋಲೀಸರ ಗುಂಡಿಗೆ ಬಲಿಯಾದ ಹುತಾತ್ಮರ ಗೌರವಾರ್ಥವಾಗಿ ನಿರ್ಮಿಸಲಾಗಿದ್ದ ಹುತಾತ್ಮರ ಸ್ಮಾರಕವನ್ನು ಸರಕಾರವು ಕಿತ್ತುಹಾಕಿದುದರಿಂದ ಆಗಸ್ಟ 12ರಿಂದ ಅಹಮದಾಬಾದ್‌ನಲ್ಲಿ ಪರಿಸ್ಥಿತಿಯು ಉದ್ರಿಕ್ತಗೊಂಡಿದೆ. ಆಗಸ್ಟ 11ರಂದು ರಾತ್ರೆ ಸರಕಾರವು ಹುತಾತ್ಮರ ಸ್ಮಾರಕವನ್ನು ಕಿತ್ತುಹಾಕಿತು. ಇದರಿಂದ ಉದ್ರಿಕ್ತರಾದ ಜನರು ಪ್ರದರ್ಶನ ನಡೆಸಿದಾಗ ಅನೇಕ ಕಡೆಗಳಲ್ಲಿ ತೀವ್ರವಾದ ಲಾಠಿ ಚಾರ್ಜು ನಡೆದು, ನಂತರ ನಡೆದ ಗೋಲೀಬಾರಿನಲ್ಲಿ ಹಲವರು ಮಡಿದಿದ್ದಾರೆ. ಅನೇಕರಿಗೆ ತೀವ್ರ ಘಾಯಗಳಾಗಿವೆ.

ಆಗಸ್ಟ 12ರಿಂದ ಆರಂಭವಾದ ಈ ಗಲಭೆಯು ನಂತರವೂ ಮುಂದುವರಿಯುತ್ತಿದೆ. 13 ಮತ್ತು 14ನೇ ತಾರೀಖುಗಳಲ್ಲಿ ಮತ್ತೆ ಮತ್ತೆ ಗೋಳೀಬಾರು ಮತ್ತು ಲಾಠಿ ಪ್ರಹಾರ ಜರುಗಿದೆ. ಕರ್ಫ್ಯೂ ಆಜ್ಞೆ ಜಾರಿಯಲ್ಲಿದ್ದರೂ ಸಹ ಜನ ಅದನ್ನು ಮುರಿದು, ಸರಕಾರದ ವರ್ತನೆಯ ಬಗ್ಗೆ ತಮ್ಮ ಪ್ರತಿಭಟನೆಯನ್ನು ತೋರಿದ್ದಾರೆ.

ಸರಕಾರದ ದಬ್ಬಾಳಿಕೆ ನೀತಿಯನ್ನು ಪ್ರತಿಭಟಿಸಲು ಮಹಾಗುಜರಾತ್ ಸಮಿತಿಯ ನೇತೃತ್ವದಲ್ಲಿ ಸತ್ಯಾಗ್ರಹ ಆರಂಭಿಸಲಾಗಿದೆ. ಸಮಿತಿಯ ಅಧ್ಯಕ್ಷರಾದ ಇಂದುಲಾಲ್ ಯಾಜ್ಞಿಕ್, ಗುಜರಾತ್ ಕಮ್ಯೂನಿಸ್ಟ ನಾಯಕರಾದ ದಿವಕರ ಮೆಹ್ತಾ ಮತ್ತಿತರರ ಬಂಧನವಾಗಿದೆ.

ಸಂಯುಕ್ತ ಮಹಾರಾಷ್ಟ್ರ ಸಮಿತಿಯು ಸರಕಾರದ ದಬ್ಬಾಳಿಕೆಯನ್ನು, ಹುತಾತ್ಮರ ಸ್ಮಾರಕವನ್ನು ಕಿತ್ತುಹಾಕಿದುದರ ನೀತಿಯನ್ನು ಖಂಡಿಸಿ ಹೋರಾಡುತ್ತಿರುವ ಗುಜರಾತ್ ಜನತೆಗೆ ತನ್ನ ಬೆಂಬಲವನ್ನು ಸೂಚಿಸಿದೆ. ಸಮಿತಿಯಿಂದ ಏರ್ಪಡಿಸಲಾಗಿದ್ದ ಬೃಹತ್ ಪ್ರದರ್ಶನ ಶಾಂತ ರೀತಿಯಲ್ಲಿ ನಡೆದಿದೆ.

ಮಹಾ ಗುಜರಾತ್ ಸಮಿತಿಯು ನಡೆಸುತ್ತಿರುವ ಸ್ಮಾರಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಮಹಾರಾಷ್ಟ್ರದಿಂದ ಸ್ವಯಂಸೇವಕರು ಭಾಗವಹಿಸಲಿದ್ದಾರೆ.

ಲೋಕಸಭೆಯಲ್ಲಿಯೂ ಈ ಬಗ್ಗೆ ನಿಲುವಳಿ ಸೂಚನೆ ಮಂಡಿತವಾಗಿದ್ದು, ವಿರೋಧ ಪಕ್ಷಗಳು ಸಭಾತ್ಯಾಗ ನಡೆಸಿವೆ. ಸರಕಾರದ ಈ ದಬ್ಬಾಳಿಕೆ ನೀತಿ ದೇಶದ ಗಮನವನ್ನು ಸೆಳೆದಿದೆ ರಾಜ್ಯ ಪುನರ್ವಿಂಗಡನೆಯ ಸಂದರ್ಭದಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರ ಜನತೆಗಾಗಿರುವ ಅನ್ಯಾಯ ಎಲ್ಲರಿಗೂ ತಿಳಿದಿದೆ. ಸರಕಾರವು ತನ್ನ ಈ ಅನೀತಿಯನ್ನು ಕೈ ಬಿಡಲು ಸಿದ್ಧವಿಲ್ಲ. ಹೋರಾಟದಲ್ಲಿ ಮಡಿದ ಹುತಾತ್ಮರ ಸ್ಮಾರಕವನ್ನು ಕಿತ್ತು ಹಾಕಿದ ಸರಕಾರದ ನೀತಿ ಖಂಡನೀಯವಾಗಿದೆ. ಅಹಮದಾಬಾದಿನಲ್ಲಿ ಏರ್ಪಟ್ಟಿರುವ ಇಂದಿನ ಪರಿಸ್ಥಿತಿಗೆ ಸರಕಾರವೇ ಹೊಣೆಯಾಗಿದೆ.

## ಕಲ್ಕತ್ತಾದಲ್ಲಿ ಟ್ರಾಂವೆ ಕೆಲಸಗಾರರ ಮುಷ್ಕರ

ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳಲು ಕಲ್ಕತ್ತಾದ ಟ್ರಾಂವೆ ಕೆಲಸಗಾರರು ಆಗಸ್ಟ 12ರಿಂದ ಮುಷ್ಕರವನ್ನಾರಂಭಿಸಿದ್ದಾರೆ. ಬ್ರಿಟಿಷರ ಮಾಲಿಕತ್ವದಲ್ಲಿರುವ ಟ್ರಾಂವೆ ಕಂಪೆನಿಯಲ್ಲಿ ದುಡಿಯುತ್ತಿರುವ ಎಲ್ಲ ವಿಭಾಗದ ಕೆಲಸಗಾರರೂ ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಎ.ಐ.ಟಿ.ಯು.ಸಿ., ಐ. ಎನ್. ಟಿ. ಯು. ಸಿ. ಮತ್ತು ಎಚ್. ಎಂ. ಎಸ್. ನೇತೃತ್ವದಲ್ಲಿರುವ ಸಂಘಗಳ ಪ್ರತಿನಿಧಿಗಳು ಒಂದುಗೂಡಿ ಸ್ಥಾಪಿಸಿರುವ ಜಂಟಿ ಸಮಿತಿಯು ಕೊನೆಯ ಘಳಿಗೆಯವರೆಗೂ ಸಂಧಾನ ನಡೆಸಿದರೂ ವಿಫಲಗೊಂಡಿತು. ಜಂಟಿ ಸಮಿತಿಯ ಸದಸ್ಯರು ರಾಜ್ಯದ ಕಾರ್ಮಿಕರ ಸಚಿವರನ್ನು ಭೆಟ್ಟಿಯಾಗಿ ಸರಕಾರವು ಕಾರ್ಮಿಕ ಸಚಿವರೇ ಸೂಚಿಸಿರುವ ಬದಲಾವಣೆಯನ್ನು ಕಂಪೆನಿಯವರು ಒಪ್ಪುವಂತೆ ಮಾಡಿದಲ್ಲಿ ತಾವು ಮುಷ್ಕರ ಹಿಂತೆಗೆದುಕೊಳ್ಳುವುದಾಗಿ ತಿಳಿಸಿದರೂ, ಅದು ಸಾಧ್ಯವಾಗಲಿಲ್ಲ. ಕಾರಣ ಕಂಪೆನಿಯ ಏಜಂಟರು ಕಾಶ್ಮೀರದಲ್ಲಿ ರಜೆ ಇರುವುದರಿಂದ ಮ್ಯಾನೇಜ್‌ಮೆಂಟು ಸಲಹೆಯನ್ನು ಒಪ್ಪಿಕೊಳ್ಳಲಿಲ್ಲ.

13 ಲಕ್ಷ ಪ್ರಯಾಣಿಕರು ಕಲ್ಕತ್ತಾ ಟ್ರಾಂವೆ ಬಳಸುತ್ತಾರೆ. 1947ರಲ್ಲಿ ಮೂರು ತಿಂಗಳ ಮುಷ್ಕರದ ನಂತರ ತಮ್ಮ ಬೇಡಿಕೆಗಳನ್ನು ಪಡೆದರು. ಸ್ವಾತಂತ್ರ್ಯ ಬಂದು ಹನ್ನೊಂದು ವರ್ಷಗಳಾದರೂ ಅವರ ಕನಿಷ್ಠ ವೇತನ ಕೇವಲ ರೂ. 36-50 ಆಗಿದೆ. ಕಳೆದ ಮಾರ್ಚ್ ತಿಂಗಳಲ್ಲಿ ಕೆಲಸಗಾರರು 13 ಅಂಶಗಳ ಬೇಡಿಕೆಯನ್ನು ಮಂಡಿಸಿದರು. ಅದರಲ್ಲಿ ನಾಲ್ಕು ಬೇಡಿಕೆಯನ್ನು ಬಿಡಲಾಯಿತು. ಇದರಲ್ಲಿ ಮುಖ್ಯವಾದುವು ಹಿಂದಿನ ಟ್ರಿಬ್ಯೂನಲ್ ಅವಾರ್ಡನ್ನು ಪೂರ್ತಿ ಜಾರಿಗೆ ತರುವುದು ಸರ್ವೀಸ್ ಪುಸ್ತಕ ಇರಿಸುವುದು, ಸರ್ವಿಸ್ ಬೋರ್ಡ್ ಸ್ಥಾಪಿಸುವುದು, ಗ್ರ್ಯಾಚುಯಿಟಿ ಪದ್ಧತಿ ಮತ್ತೆ ಜಾರಿಗೆ ತರುವುದು ಇತ್ಯಾದಿ.

ಈ ಬೇಡಿಕೆ ವಿಷಯಗಳನ್ನು ಮುಖ್ಯ ಮಂತ್ರಿಗಳ ಮುಂದೆ ಚರ್ಚಿಸುತ್ತಿರುವಾಗಲೆ, ಕಾರ್ಮಿಕ ಸಚಿವರು ಅವನ್ನು ಟ್ರಿಬ್ಯೂನಲ್ಲಿಗೆ ಹಾಕಲು ಆಜ್ಞೆ ಮಾಡಿದರು. ಜಂಟಿ ಸಮಿತಿಯು ಟ್ರಿಬ್ಯೂನಲ್ ಅನ್ನು ಬಹಿಷ್ಕರಿಸಿತು. ಕಾರಣ ಕಳೆದ ಟ್ರಿಬ್ಯೂನಲ್ ಅವಾರ್ಡನ್ನು ಜಾರಿಗೆ ತರುವುದು ಸರಕಾರದ ಕರ್ತವ್ಯವಾಗಿತ್ತು. ನಂತರ ಕಾರ್ಮಿಕ ಸಚಿವರು ಇತ್ತ ಸಲಹೆಗಳನ್ನು

(೯ನೇ ಪುಟ ನೋಡಿ)

## ಲೋಕ ಸಭೆಯಲ್ಲಿ ಕಳೆದ ವಾರ.....

# ಕೇರಳದ ಬಗ್ಗೆ ನೆಹರೂ ಹೇಳಿಕೆ ಕುರಿತು ನಿಲುವಳಿ ಸೂಚನೆ

ಆಗಸ್ಟ್ 12ರಿಂದ ಆರಂಭವಾದ ಲೋಕಸಭಾಧಿವೇಶನದಲ್ಲಿ ಆರಂಭದ ದಿನವೇ ನಿಲುವಳಿ ಸೂಚನೆಗಳು ಮಂಡಿತವಾದುವು. ಕೇರಳದ ಬಗ್ಗೆ ಪಂಡಿತ ನೆಹರೂರವರು ಪತ್ರಿಕಾ ಸಮ್ಮೇಳನದಲ್ಲಿ ಇತ್ತ ಹೇಳಿಕೆಯನ್ನು ಪ್ರಶ್ನಿಸಿ ಕಮ್ಯೂನಿಸ್ಟ್ ನಾಯಕರಾದ ಶ್ರೀ ಎಸ್. ಎ. ಡಾಂಗೆಯವರು ಒಂದು ನಿಲುವಳಿ ಸೂಚನೆ ಮಂಡಿಸಿದ್ದರು. ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಮೆನನ್‌ರವರು ಕೇರಳದ ಪರಿಸ್ಥಿತಿಯ ಕುರಿತು ಚರ್ಚಿಸಲು ಒಂದು ನಿಲುವಳಿ ಸೂಚನೆ ಮಂಡಿಸಿದ್ದರು. ನಲುವತ್ತೈದು ನಿಮಿಷಗಳ ಚರ್ಚೆಯ ನಂತರ ನಿಲುವಳಿಗಳನ್ನು ಸಭಾಧ್ಯಕ್ಷರು ತಳ್ಳಿಹಾಕಿದರು. ಆದರೆ ಬೇರೊಂದು ಸಂದರ್ಭ ಬಳಸಿಕೊಂಡು ವಿಷಯವನ್ನು ಚರ್ಚಿಸಲು ಅವಕಾಶ ಒದಗಿಸುವುದಾಗಿ ಸಭಾಧ್ಯಕ್ಷರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕಮ್ಯೂನಿಸ್ಟ್ ನಾಯಕ ಡಾಂಗೆಯವರ ಭಾಷಣದ ಕೆಲ ವಂಶಗಳನ್ನು ಇಲ್ಲಿ ಕೊಡಲಾಗಿದೆ.

### ಎಸ್. ಎ. ಡಾಂಗೆಯವರ ಭಾಷಣ

ಪಂಡಿತ ನೆಹರೂರವರು ಕೇರಳದ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಏಕಪಕ್ಷೀಯವಾಗಿವೆ. ರಾಜ್ಯದ ಕಾನೂನು ಮತ್ತು ಶಿಸ್ತು ಪರಿಪಾಲನೆಯ ಬಗ್ಗೆ ಇಲ್ಲಿ ಚರ್ಚಿಸುವುದನ್ನು ನಾನು ವಿರೋಧಿಸುತ್ತೇನೆ. ಆದರೆ ಪರಿಸ್ಥಿತಿಯ ವಿಷಯ ಸರಿಯಾಗಿ ತಿಳಿದುಕೊಳ್ಳಲು ಇಚ್ಛಿಸಿದಲ್ಲಿ ಅಭ್ಯಂತರವಿಲ್ಲ. ಕಾನೂನು ಮತ್ತು ಶಿಸ್ತು ಪರಿಪಾಲನೆಯ ವಿಷಯ ಬಂದಾಗಲೆಲ್ಲ ಅಧ್ಯಕ್ಷರು ಅದು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ್ದೆಂದು ತಳ್ಳಿಹಾಕಿದ್ದಾರೆ. ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಲವಿರುವುದರಿಂದ ಪ್ರತ್ಯೇಕ ಮನೋಭಾವ ತೋರ್ಪಡಿಸಿದಲ್ಲಿ, ಚರ್ಚೆ ನಡೆಸಲು ನನ್ನ ಅಭ್ಯಂತರವಿಲ್ಲ. ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳಿರುವುದರಿಂದ ಅವಕ್ಕೆ ಅವಕಾಶ ಕೊಡುವುದಿಲ್ಲ. ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರವಿರುವುದರಿಂದ ಈ ರೀತಿ ಭೇಧವೆಣಿವುದನ್ನು ನಾನು ವಿರೋಧಿಸುತ್ತೇನೆ.

ಕೇರಳದಲ್ಲಿ ಕೆಲವು ಘಟನೆಗಳು ನಡೆದಿವೆ. ಅದನ್ನು ಇಲ್ಲಿ ವಿವರವಾಗಿ ಚರ್ಚಿಸಲು ನಾನು ಇಚ್ಛಿಸುವುದಿಲ್ಲ. ಆದರೆ ಕೇರಳದಲ್ಲಿ ಪೌರ ಸ್ವಾತಂತ್ರ್ಯಕ್ಕೆ ಆಪತ್ತು ಬಂದಿದೆ, ಜನರನ್ನು ಕೊಲೆ ಮಾಡಲಾಗುತ್ತಿದೆ ಎಂದು ಆಪಾದಿಸಲಾಗಿದೆ. ಅದ್ದರಿಂದ ಇಲ್ಲಿ ಚರ್ಚಿಸುವುದು ಸೂಕ್ತವಾಗಿಯೆಂದು ಹೇಳಲಾಗಿದೆ. ಆದರೆ ಯಾರ ಕೊಲೆಯಾಗಿದೆ ಎಂಬುದನ್ನು ತಿಳಿಯುವುದು ಯುಕ್ತವಾಗಿರುತ್ತದೆ. ಎಷ್ಟೆಷ್ಟು ಕೊಲೆಗಳು ನಡೆದಿವೆ ಮತ್ತು ಅವರು ಯಾವ ಯಾವ ಪಕ್ಷಗಳಿಗೆ ಸೇರಿದವರಾಗಿದ್ದಾರೆ ಎಂಬುದನ್ನು ನೋಡೋಣ. ಆದರೆ ವಿಷಯವನ್ನು ಉದ್ರೇಕದಿಂದ ಚರ್ಚಿಸುವುದು ಬೇಡ. ರಕ್ಷಣಾ ಸಚಿವರು ಮತ್ತು ಅವರ ಹಿಂದೆ ಕಾಂಗ್ರೆಸ್ ಅಧ್ಯಕ್ಷ ಢೇಬರರು ಕೇರಳದಲ್ಲಿ ವಿಚಾರಣೆಗಾಗಿ ಹೋಗುತ್ತಾರೆಂದು ನನಗೆ ತಿಳಿದುಬಂದಿದೆ. ಆದರೆ ಅದು ಎಷ್ಟು ಮಟ್ಟಿಗೆ ಸರಿ ಎಂದು ಹೇಳಬರುವುದಿಲ್ಲ. ಕಮ್ಯೂನಿಸ್ಟರು ಮತ್ತು ಕಮ್ಯೂನಿಸ್ಟೇತರರು ಕೂಡಿ ಅಂಥ ವಿಚಾರಣೆ ನಡೆಸಿದಲ್ಲಿ ಸಾಧುವಾದೀತು. ಏಕೆಂದರೆ ಪೌರ ಸ್ವಾತಂತ್ರ್ಯ, ಆಸ್ತಿಯ ರಕ್ಷಣೆ ಹಾಗೂ ಜೀವದ ರಕ್ಷಣೆಯ ಪ್ರಶ್ನೆ ಎಲ್ಲರಿಗೂ ಸಂಬಂಧಿಸಿದ್ದಾಗಿದೆ.

ಐದು ಮಂದಿ ದೇಶಪ್ರೇಮಿಗಳ ಕೊಲೆಯಾಗಿದೆ. ಮಾನ್ಯ ಗೃಹಸಚಿವರಾಗಲೀ ಪ್ರಧಾನಿಗಳಾಗಲೀ ತನಿಖೆ ನಡೆಸಿದಲ್ಲಿ ಮಡಿದ ಒಬ್ಬನಾದರೂ ಅಪರಾಧಿಯಾಗಿದ್ದನೆಂಬುದು ತಿಳಿದು ಬರುತ್ತದೆ. ಅವನಿಗೂ ರಾಜಕೀಯಕ್ಕೂ ಯಾವ ಸಂಬಂಧವೂ ಇರಲಿಲ್ಲ.

ನಾನು ಇಲ್ಲಿ ರಾಜಕೀಯ ಕೊಲೆಯ ವಿಚಾರ ಮಾತನಾಡುತ್ತಿದ್ದೇನೆಯೆ ಹೊರತು ಸಾಮಾನ್ಯ ಕೊಲೆಯ ವಿಚಾರವಲ್ಲ. ಯಾವ ರಾಜ್ಯದಲ್ಲಾದರೂ ಕೊಲೆ ಅಪಾದನೆಗಳು ನಡೆಯುತ್ತವೆ. ಕೊಲೆಯಾದವರೆನ್ನೆಲ್ಲ ಕಾಂಗ್ರೆಸ್ ಪಕ್ಷ ಅಥವಾ ಪ್ರಸಮಾ ಪಕ್ಷದ ಸದಸ್ಯರೆಂದು ಹೇಳಿಕೊಂಡಲ್ಲಿ ಅಡ್ಡಿಯೇನಿಲ್ಲ. ಹಾಗೆ ಸದಸ್ಯತ್ವವನ್ನು ಹೆಚ್ಚಿಸಿಕೊಳ್ಳಬಹುದು. ಆಗ ಅವರು ಕಾಂಗ್ರೆಸ್ ಸದಸ್ಯರನ್ನು ಗಲ್ಲಿಗೆ ಹಾಕಲಾಗಿದೆ ಎಂದೂ ಹೇಳಬಹುದು. ಅದು ರಾಜಕೀಯ ಕೊಲೆಯಲ್ಲವೆಂದೂ ಬೇರೆ ಘಟನೆಯೆಂದೂ ನಾನು ಹೇಳಬಯಸುತ್ತೇನೆ.

ಪೌರ ಸ್ವಾತಂತ್ರ್ಯದ ಬಗ್ಗೆ ಹೇಳಲಾಗಿದೆ. ನನಗೆ ತಿಳಿದು ಬಂದಿರುವ ಒಂದೇ ಸಂಗತಿಯೆಂದರೆ, ಇಬ್ಬರು ಕುಡುಕರು ರಸ್ತೆಯಲ್ಲಿ ಹೊಡೆದಾಡಿದ್ದು. ಅವರಲ್ಲಿ ಒಬ್ಬ ಮಡಿದ. ಕುಡಿದು ಮತ್ತರಾಗಿ ರಸ್ತೆಯಲ್ಲಿ ಜಗಳಾಡಲಿಕ್ಕೆ ಅವರಿಗೆ ಪೂರ್ಣ ಹಕ್ಕಿದೆ. ಆದರೆ ಹೊಡೆದಾಟದಲ್ಲಿ ಕೊಲೆಯಾದೊಬ್ಬನನ್ನು ಪ್ರಸಮಾ ಪಕ್ಷದ ಸದಸ್ಯನೆಂದು ಹೇಳಿಕೊಳ್ಳಲಾಗಿದೆ. ಇದು ನಿಜವಾಗಿಯೂ ಹಾಸ್ಯಾಸ್ಪದವಾದ ಸಂಗತಿಯೇ ಸರಿ.

ಪ್ರಧಾನ ಮಂತ್ರಿಗಳು ಪೌರ ಸ್ವಾತಂತ್ರ್ಯವನ್ನು ಭಂಗಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಹೀಗೆ ಹೇಳಿದ್ದು ನನಗೆ ಅರ್ಥವಾಗಿಲ್ಲ. ಕೇರಳದಲ್ಲಿ ಅಂಥ ಗಂಭೀರವಾದ ಪ್ರಶ್ನೆ ಏನಿಲ್ಲ ಎಂದು ಒಂದು ಹೇಳಿಕೆಯಿತ್ತರು. ನಂತರ ಕಾಂಗ್ರೆಸ್ ಶಿಷ್ಯ ಮಂಡಲದ ಒತ್ತಾಯದ ಪರಿಣಾಮವಾಗಿರಬಹುದು, ಇನ್ನೊಂದು ಹೇಳಿಕೆಯ ತದ್ವಿರುದ್ಧವಾಗಿ ಮಾಡಿದರು. ಈ ವಿಷಯದ ಬಗ್ಗೆ ಪರಿಶೀಲನೆ ಮಾಡಬೇಕಿದ್ದಲ್ಲಿ ಎರಡೂ ಕಡೆಯವರೂ ಉದ್ರೇಕವಿಲ್ಲದೆ ಪರಿಶೀಲಿಸೋಣ. ಆದರೆ ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿ ಮಂಡಲವಿರುವುದರಿಂದ ಅದನ್ನು ತುಳಿಯುವ ದೃಷ್ಟಿಯಿಂದ ಕೂಡಿರ ಕೂಡದು.

ಕೇರಳದ ಕಮ್ಯೂನಿಸ್ಟ್ ಮಂತ್ರಿ ಮಂಡಲದ ನೀತಿ ಮತ್ತು ಕಾರ್ಯಗಳು ಕಾಂಗ್ರೆಸ್ಸಿಗರನ್ನು ರೊಚ್ಚಿಗೆಬ್ಬಿಸಿವೆ. ಮಂತ್ರಿ ಮಂಡಲ ಅಧಿಕಾರ ವಹಿಸಿಕೊಂಡೊಡನೆಯೇ ಸರಕಾರವು ಹೊಲದಿಂದ ಹೊಸದೂಡುವುದರ ವಿರುದ್ಧ ಆಜ್ಞೆ ಹೊರಡಿಸಿತು, ಈ ವರೆಗೆ ಕಾಂಗ್ರೆಸ್ ಮಂತ್ರಿ ಮಂಡಲ ಇದನ್ನು ಮಾಡಿರಲಿಲ್ಲ. ಅವರು ಈಗ ವರದಕ್ಷಿಣೆ ಮಸೂದೆಯೊಂದನ್ನು ತಂದಿದ್ದಾರೆ. ಕೇರಳದಲ್ಲಿ ಚರ್ಚುಗಳವರು ವರದಕ್ಷಿಣೆ ಮೇಲೆ ಶೇಕಡ 6ರಿಂದ 10ರ ವರೆಗೆ ಕಮಿಶನ್ ಪಡೆಯುತ್ತಿದ್ದಾರೆ. ಸರಕಾರದ ಈ ಮಸೂದೆಯಿಂದ ಅವರಿಗೆ ತೊಂದರೆಯುಂಟಾಗಿದೆ.

ಪಂಡಿತ ನೆಹರೂರವರು ವ್ಯಕ್ತಪಡಿಸಿರುವ ಕಳವಳವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ ಆದರೆ, ಅವರು ಪತ್ರಿಕೆಗಳಿಗೆ ಇತ್ತಿರುವ ಸಾಮಾನ್ಯ ಹೇಳಿಕೆಯ ರೀತಿಯು ನ್ಯಾಯ ಮತ್ತು ಶಿಸ್ತನ್ನು ಉಲ್ಲಂಘಿಸುತ್ತಿರುವ ಕೆಲವರಿಗೆ ಅಂಥ ಹೇಳಿಕೆಗಳು ನೇರವಾಗಿ ಒಳವ್ಯವಹಾರದಲ್ಲಿ ತಲೆಹಾಕಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತವೇ ಹೊರತು, ಉತ್ತಮಗೊಳಿಸುವುದಿಲ್ಲ. ಆದ್ದರಿಂದಾಗಿ ನಾನು ಇಂಥ ಹೇಳಿಕೆಗಳನ್ನು ಮಾಡಕೂಡದೆಂದು ತಿಳಿಸುತ್ತೇನೆ.

### ಅಹಮದಾಬಾದ್ ಗೋಳೀಬಾರಿನ ಬಗ್ಗೆ ವಿರೋಧ ಪಕ್ಷಗಳ ಸಭಾತ್ಯಾಗ

ಲೋಕ ಸಭೆಯ ಅಧಿವೇಶನದ ಎರಡನೆಯ ದಿನದಂದು ಅಹಮದಾಬಾದ್‌ನಲ್ಲಿ ನಡೆದ ಪೋಲೀಸರ ಗೋಳೀಬಾರನ್ನು ಪ್ರತಿಭಟಿಸಿ, ಮಡಿದ ಹುತಾತ್ಮರಿಗೆ ಸಂತಾಪ ಸೂಚಿಸಲು ವಿರೋಧ ಪಕ್ಷಗಳವರು ಸಭಾತ್ಯಾಗ ಮಾಡಿದರು.

ಅಹಮದಾಬಾದಿನಲ್ಲಿ ಹುತಾತ್ಮರ ಸ್ಮಾರಕವನ್ನು ಕಿತ್ತುಹಾಕಿದ ನಂತರದಲ್ಲಿ ಏರ್ಪಟ್ಟಿರುವ ಉದ್ರಿಕ್ತ ಪರಿಸ್ಥಿತಿ ಹಾಗೂ ಪೋಲೀಸರ ಗೋಳೀಬಾರಿನ ಬಗ್ಗೆ ಸಭೆಯಲ್ಲಿ ಹತ್ತು ನಿಲುವಳಿ ಸೂಚನೆಗಳು ಮಂಡಿತವಾಗಿದ್ದುವು. ಪ್ರಶ್ನೆಯು ಪೂರ್ಣವಾಗಿ ರಾಜ್ಯ ಸರಕಾರಕ್ಕೆ ಸಂಬಂಧಿಸಿದ್ದುದರಿಂದ ಸಭಾಧ್ಯಕ್ಷರು ಅವನ್ನು ತಳ್ಳಿಹಾಕಿದರು.

ಗೃಹ ಸಚಿವ ಪಂತ್‌ರವರು ಹೇಳಿಕೆಯನ್ನಿತ್ತ ನಂತರ ನಡೆದ ಚರ್ಚೆಯಲ್ಲಿ, ಸ್ವತಂತ್ರ ಸದಸ್ಯರಾದ ನೌಷರ್ ಬರೂಚ್‌ರವರು, ಮುಂಬಯಿ ರಾಜ್ಯ ಅಹಮದಾಬಾದ್‌ನಲ್ಲಿ ಗಲಭೆಗಳು ನಡೆದಿರುವುದನ್ನು ನೋಡಿದರೆ ಸರಕಾರದಿಂದ ಕಾನೂನು ಮತ್ತು ಶಿಸ್ತನ್ನು ಕಾಪಾಡಲು ಸಾಧ್ಯವಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ಕೇಂದ್ರ ಸರಕಾರವು ಘಟನೆಯ 355ನೇ ವಿಧಿಯಂತೆ ಪ್ರವೇಶಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

(೬ನೇ ಪುಟ ನೋಡಿ)

## ಸ್ವಲ್ಪದರಲ್ಲಿ ಸುದ್ದಿ

### ಯಿನ್ ಹುವಾ

ದಿವಂಗತ ಡಾ। ದ್ವಾರಕಾನಾಥ ಕೋಟ್ನೀಸ್ ಅವರ ವಿಧವೆ ಮೇಡಂ ಕುವೊ ಚಿಂಗ್ ಲಾನ್ ಮತ್ತು ಮಗ ಇಬ್ಬರೂ ಭಾರತಕ್ಕೆ ಭೇಟಿಯೀಯಲು ಪ್ರಥಮ ಬಾರಿಯಾಗಿ ಬಂದಿದ್ದಾರೆ.

ಚೀನೀಯರು ನಡೆಸಿದ್ದ ಜಪಾನ ವಿರುದ್ಧ ಕದನದಲ್ಲಿ ವೈದ್ಯಕೀಯ ಸಹಾಯ ನೀಡಲು ತೆರಳಿದ್ದ ಮಂಡಳಿಯ ನಾಯಕರಾಗಿ ಡಾ। ಕೊಟ್ನೀಸ್ ೨೦ ವರುಷಗಳ ಹಿಂದೆ ತೆರಳಿದ್ದರು. ಚೀನಾದಲ್ಲಿದ್ದಾಗ ಅವರು ಚೀನೀ ಮಹಿಳೆಯನ್ನು ಮದುವೆಯಾಗಿದ್ದರು. ಅವರಿಗೊಬ್ಬ ಪುತ್ರ ಜನಿಸಿದ. ಮಗನಿಗೆ **ಯಿನ್ ಹುವಾ** ಅಂದರೆ **ಇಂಡಿಯಾ – ಚೀನಾ** ಎಂದು ಹೆಸರಿಡಲಾಯಿತು.

ಮೇಡಂ ಕುವೊ ಚಿಂಗ್ ಮತ್ತು ಮಗ ಯಿನ್ ಹುವಾ ಇಬ್ಬರೂ ಡಾ। ಕೊಟ್ನೀಸರ ಸಂಬಂಧಿಕರೊಡನೆ ಒಂದೆರಡು ವಾರ ಇರುತ್ತಿದ್ದಾರೆ.

○ ○ ○

### ಬಲ್ಗೇರಿಯಾದ ಬೇಸಾಯ

ಬಲ್ಗೇರಿಯಾದ ಶೇ. 75ರಷ್ಟು ಭೂಮಿ ಸಹಕಾರೀ ಬೇಸಾಯಕ್ಕೆ ಒಳಪಟ್ಟಿದೆಯೆಂದು ಬಲ್ಗೇರಿಯಾಕ್ಕೆ ತೆರಳಿದ್ದ ಶ್ರೀ ಕೆ. ಆನಂದನ್ ನಂಬಿಯಾರ್ ಅವರು ಭಾರತಕ್ಕೆ ಬಂದ ಬಳಿಕ ಪತ್ರಿಕಾ ಹೇಳಿಕೆಯಲ್ಲಿ ತಿಳುಹಿಸಿದ್ದಾರೆ. ಭಾರತ—ಬಲ್ಗೇರಿಯಾ ಮೈತ್ರಿ ಮಂಡಲದೊಂದಿಗೆ ಅವರು ತೆರಳಿದ್ದರು.

ಅಲ್ಲಿಯ ಬೇಸಾಯ ಸಂಪೂರ್ಣ ಯಾಂತ್ರೀಕರಣವಾಗಿದ್ದು ಬಳಕೆಯ ಸಾಮಗ್ರಿಗಳ ಉತ್ಪಾದನೆಯಲ್ಲಿ ಬಲ್ಗೇರಿಯಾ ತೃಪ್ತಿಕರ ಮುನ್ನಡೆಯಲ್ಲಿದೆಯೆಂದೂ ತಿಳುಹಿಸಿದರು.

○ ○ ○

### ೧೨ ಗಂಟೆ ಪ್ರಯಾಣ

ಕಳೆದ ವಾರದಿಂದ ರಷ್ಯಾ—ಭಾರತ ವಿಮಾನಯಾನ ಸಂಪರ್ಕವು ಆರಂಭವಾಗಿದೆ. ಈಗ ದಿಲ್ಲಿ ಮಾಸ್ಕೋಗಳ ಸಂಪರ್ಕ ಕೇವಲ ೧೨ ಗಂಟೆಗಳದ್ದಾಗಿದೆ. ತಾಷ್ಕೆಂಟ್‌ನಲ್ಲಿ ಮಾತ್ರ ಒಮ್ಮೆ ವಿಮಾನಗಳು ನಿಲ್ಲುವುವು. ಈ ಯಾನ ವಾರದಲ್ಲಿ ಎರಡು ಸಲ ನಡೆಯುತ್ತದೆ. ಈ ಪ್ರಯಾಣಕ್ಕಾಗಿ ಏರ್ ಇಂಡಿಯಾ ಇಂಟರ್ ನ್ಯಾಷನಲ್‌ನವರು ಹೊಚ್ಚ ಹೊಸ ಸೂಪರ್ ವಿಮಾನಗಳನ್ನೂ ರಷ್ಯವು ತು. 104 ವಿಮಾನಗಳನ್ನೂ ಹಾಕಿವೆ.

○ ○ ○

### 'ಹಿಂದೂ' ಆರಂಭ

ಎಂಭತ್ತು ವರುಷಗಳ ಆಯುಸ್ಸಿನ 'ಹಿಂದೂ' ಪ್ರಥಮ ಬಾರಿ ಒಂದು ವಾರ ಪ್ರಕಟವಾಗದಂಥ ಪರಿಣಾಮ ಮಾಡಿ ಹಿಂದೂ ಮತ್ತು ನ್ಯಾಷನಲ್ ಯೂನಿರ್ಯ ಪ್ರೆಸ್ ಕೆಲಸಗಾರರ ಮುಷ್ಕರ ಮುಗಿದು ಯೂನಿಯನ್ನಿಗೂ ಮಾಲೀಕರಿಗೂ ಒಪ್ಪಂದವಾಯಿತು. ಯೂನಿಯನ್ನಿನ ಉಪಾಧ್ಯಕ್ಷ ಟಿ. ಜಿ. ಬಾಲಸುಬ್ರಹ್ಮಣ್ಯಂ ಅವರನ್ನೂ ಮುಷ್ಕರ ಹೂಡಿದ ಎಲ್ಲ ಕೆಲಸಗಾರರನ್ನೂ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಲು ಮಾಲೀಕರು ಸಂಧಾನದ ಪ್ರಕಾರ ಒಪ್ಪಿಕೊಂಡಿದ್ದಾರೆ. ಆಗಸ್ಟ್ 12ರಿಂದ 'ಹಿಂದೂ' ಪ್ರಕಟಣೆಯನ್ನು ಆರಂಭಿಸಿದೆ.

○ ○ ○

ಪಾರ್ಲಿಮೆಂಟಿನ ಸೆಂಟ್ರಲ್ ಹಾಲ್‌ನಲ್ಲಿ ನೇತಾಜಿ ಸುಭಾಷಚಂದ್ರ ಬೋಸರ ಭಾವಚಿತ್ರ ವಿರಬೇಕೆಂದು ಪಾರ್ಲಿಮೆಂಟಿನಲ್ಲಿರುವ ಕಮ್ಯೂನಿಸ್ಟ್ ಸದಸ್ಯರು ಕೇಳಿಕೊಂಡಿದ್ದಾರೆ.

ಕಮ್ಯೂನಿಸ್ಟ್ ನಾಯಕರಾದ ಶ್ರೀ ಭೂಪೇಶಗುಪ್ತರು ರಾಜ್ಯ ಸಭೆಯ ಅಧ್ಯಕ್ಷರಿಗೆ ಕಾಗದವೊಂದನ್ನು ಬರೆದು ಪಾರ್ಲಿಮೆಂಟಿನಲ್ಲಿರುವ ಭಾವಚಿತ್ರಗಳ ಮಾಲಿಕೆಯಲ್ಲಿ "ಭಾರತ ಸ್ವಾತಂತ್ರ್ಯ ಹೋರಾಟದ ಮಹಾ ನಾಯಕರಲ್ಲೊಬ್ಬರಾದ ಶ್ರೀ ಸುಭಾಷ್ ಚಂದ್ರ ಬೋಸ್ ರವರ ಭಾವಚಿತ್ರವೊಂದನ್ನು ಸೇರಿಸಬೇಕು" ಎಂದು ವಿನಂತಿಸಿದ್ದಾರೆ.

## ಪುಂಗಾಳು

"ಯುರೋಪಿನ ಪ್ಯಾರಿಸ್, ಲಂಡನ್ ಮುಂತಾದ ನಗರಗಳನ್ನೂ ನೋಡಿದ್ದೇನೆ. ಅಲ್ಲಿ ಸೂಳೆಗಾರಿಕೆ ತುಂಬಿದೆ. ನಗ್ನ ಸ್ತ್ರೀಯರು ಪ್ರದರ್ಶನಕ್ಕೆ ನಿಂತಿರುತ್ತಾರೆ. ಆದರೆ ಸೋವಿಯತ್ ರಷ್ಯಾದಲ್ಲಿ ಒಂದೆಡೆಯೂ ನಾನು ವೇಶ್ಯಾಗೃಹವನ್ನು ಕಾಣಲಿಲ್ಲ, ನೈಟ್‌ಕ್ಲಬ್ ನೋಡಲಿಲ್ಲ" ಎಂದು ಕೆಂಗಲ್ ಹನುಮಂತಯ್ಯನವರು ರಷ್ಯಾ ಸಂಚಾರದ ಬಳಿಕ ಬೆಂಗಳೂರಿನಲ್ಲಿ ಮಾತನಾಡುತ್ತ ಹೇಳಿದರಂತೆ.

"ಅಯ್ಯೋ ಎಂಥಾ ದುರಾದೃಷ್ಟಕರವಾದ ದೇಶಕ್ಕೆ ಹೋಗಿ ಬಂದಿರಿ ಮಹಾಸ್ವಾಮಿ" ಎಂದು ಸಭಿಕರಲ್ಲೊಬ್ಬರು ಗೊಣಗುಟ್ಟಿಯೂ ಬಿಟ್ಟರಂತೆ

० ० ०

"ಮಾಸ್ಕೋ ಯೂನಿವರ್ಸಿಟಿ ಅತ್ಯದ್ಭುತವಾಗಿದೆ. ಅಂಥ ಕಟ್ಟಡವನ್ನೇ ನಾನೆಲ್ಲೂ ನೋಡಲಿಲ್ಲ." ಎಂದು ಅದೇ ಹನುಮಂತಯ್ಯನವರು ನಮ್ಮ ದೇಶದಲ್ಲಿ ಇಂಥ ಭಾರೀ ವಿದ್ಯಾ ಕೇಂದ್ರ ಯಾವತ್ತು ಬಂದೀತೋ ಎಂದು ಹಾರೈಸಿದರು, ನಾನು ಅಧಿಕಾರದಲ್ಲಿದ್ದರೆ .... ಎಂಬ ಆಶಯವೂ ಅದರಲ್ಲಿ ಧ್ವನಿಗೊಡುತ್ತಿತ್ತು.

'ವಿಧಾನಸೌಧದ' ಕೀರ್ತಿ ಸಾಲದೆ ಅಂಥ ವಿಶ್ವವಿದ್ಯಾನಿಲಯ ರಚನೆಯ ಅಪಕೀರ್ತಿಯನ್ನೂ ಹೊರಲು ಸದರೀ ಮಾಜೀ ಸಚಿವರು ಸಿದ್ಧರಾಗುತ್ತಿರುವುದು ವಿಸ್ಮಯವೇ ಎಂದು ಒಬ್ಬರ ಪ್ರತಿಕ್ರಿಯೆ.

० ० ०

"ರಷ್ಯದಲ್ಲಿ ದೇವರು ದಿಂಡರುಗಳನ್ನು ಹೊಡೆದು ಹಾಕಿದ್ದರೂ, ಧಾರ್ಮಿಕ ಶ್ರದ್ಧೆಗಳು ಇಲ್ಲದಿದ್ದರೂ ಅವರ ನೈತಿಕ ಮಟ್ಟ ಉನ್ನತವಾದುದು. ದೇವರ ಅಸ್ತಿತ್ವವನ್ನು ಅವರು ಅಲ್ಲಗಳೆದಿದ್ದರೂ ದೇಶವೇನು ಅಧೋಗತಿಗಿಳಿದಿಲ್ಲ" ಎಂದೂ ಶ್ರೀ ಕೆಂಗಲ್ಲರು ರಷ್ಯವನ್ನು ಪ್ರಶಂಸಿದರಂತೆ.

ಶ್ರೀಮಾನ್ ಮಾಜೀ ಸಚಿವರು ತಮ್ಮ ದರ್ಬಾರದ ಕಾಲದಲ್ಲಿ ಆರಂಭಿಸಿದ್ದ ಸಂಸ್ಕೃತಿ ಪ್ರಚಾರದಿಂದ ನಮ್ಮವರ ನೈತಿಕ ಮಟ್ಟ ಒಂದು ಗುರಗುಂಜಿ ತೂಕವೂ ಮೇಲಿರಲಿಲ್ಲವಷ್ಟೇ ಅಲ್ಲ, ಸಂಸ್ಕೃತಿ ಪ್ರಚಾರಕ್ಕೆ ಮಹಾ ಮುಖ್ಯಮಂತ್ರಿಗಳು ನೀರಿನಂತೆ ಹಣ ಸುರಿದರೂ ಪ್ರಚಾರಕರನೇಕರು ಬೀರು ಕುಡಿದು ಒಪ್ಪಿಸಿದ ಸಂಸ್ಕೃತಿ ಪ್ರಚಾರದ ವರದಿಗಳು ಇನ್ನೂ ಅಪ್ರಕಟಿತವಾಗಿರುವುದರಿಂದ ನಮ್ಮ ಸಂಸ್ಕೃತಿಯ ಮಾನ ರಕ್ಷಣೆಯಾದುದಕ್ಕೆ ಅನೇಕರು ಹೆಮ್ಮೆ ಪಟ್ಟುಕೊಳ್ಳಬೇಕಾಗಿದೆ.

० ० ०

"ರಷ್ಯವು ಪ್ರತಿಯೊಂದು ಯೋಜನೆಯನ್ನೂ ಸಮಾಜದ ಹಾಗೂ ರಾಷ್ಟ್ರದ ಭದ್ರತೆಯ ಅವಶ್ಯಕತೆಗನುಗುಣವಾಗಿ ಸಿದ್ಧಪಡಿಸಿ ಕಾರ್ಯಗತಗೊಳಿಸುವದೆಂದೇ ಇಂದು ಅದು ಮಹಾರಾಷ್ಟ್ರವಾಗಿದೆ" ಎಂದೂ ಶ್ರೀ ಕೆಂಗಲ್ಲರು ಹೇಳಿದರು.

ಅಯ್ಯೋ ಮಹಾಸ್ವಾಮಿ, ವಿಧಾನ ಸೌಧವನ್ನು ಕಟ್ಟುವ ಮೊದಲು ಅಥವಾ ಕಟ್ಟಲಾರಂಭಿಸಿದ ಬಳಿಕವಾದರೂ ಈ ವಿವೇಕವನ್ನು ನೀವು ಹೊಂದಲಿಲ್ಲವಲ್ಲ, ರಷ್ಯಕ್ಕೆ ಹೋಗಿ ಬರಲಿಲ್ಲವಲ್ಲ.

० ० ०

ಕೇಂದ್ರದ ಸಚಿವ ಶ್ರೀ ಮೊರಾರ್ಜಿ ದೇಸಾಯಿ ತಮ್ಮ ಅಮೆರಿಕಾ ಮತ್ತು ಇಂಗ್ಲೆಂಡ್ ಯಾತ್ರೆಗಳ ಕಾಲಕ್ಕೆ ವಾರಪತ್ರಿಕೆಯ ಸಂಪಾದಕರೊಬ್ಬರನ್ನು ಸಹಾಯಕ್ಕೆ ಕರೆದುಕೊಂಡು ಹೋಗುವರೆಂದೂ, ಪ್ರಧಾನಿ ನೆಹ್ರೂರವರ ಸ್ಥಳಕ್ಕೆ ಶ್ರೀ ಮೊರಾರ್ಜಿಯವರೇ ಪ್ರಧಾನಿಯಾಗುವರೆಂದು ಈ ಸಂಪಾದಕರು ತಮ್ಮ ಪತ್ರಿಕೆಯ ಮೂಲಕ ಪ್ರಚಾರ ಭವಿಷ್ಯ ಹೇಳವವರಾಗಿದ್ದಾರೆಂದೂ ಪತ್ರಿಕೆಗಳಲ್ಲಿ ಗುಲ್ಲು.

"ಸರಿ, ಹಾಗಾದರೆ ಈ ಸಂಪಾದಕರಿಗೆ ಮೊರಾರ್ಜಿ ಪ್ರಧಾನಿಯಾಗಿರುವ ಸಂಪುಟದಲ್ಲಿ ಸುದ್ದಿ-ಸಂಪರ್ಕ ಶಾಖಾ ಸಚಿವತ್ವವು ಖಚಿತ" ಎಂದು ಪತ್ರಿಕೋದ್ಯಮಿ ವಲಯಗಳಲ್ಲಿ ಗುಜು ಗುಜು.

० ० ०

ಕೇರಳದಲ್ಲಾದ ಗೋಲೀಬಾರ್ ಬಗ್ಗೆ ಕಾಂಗ್ರೆಸ್ಸಿಗರು ಅತ್ಯುಗ್ರವಾಗಿ ಟೀಕಿಸಿ ಮಾತನಾಡುವಾಗ್ಗೆ ಅದೇ ಕಾಂಗ್ರೆಸ್ ಸರಕಾರದಿಂದ ಅಹ್ಮದಾಬಾದ್‌ನಲ್ಲಿ ನಡೆದ ಗೋಲಿಬಾರ್‌ನಿಂದ ಇಬ್ಬರು ಸಾವಿಗೀಡಾದರೂ ಕಾಂಗ್ರೆಸ್ ಮೌನವಾಗಿರುವುದು. ಗುಂಡು ಹಾರಿಸಿರುವುದಕ್ಕಾಗಿ ಕೇರಳ ಸರಕಾರವನ್ನು ಟೀಕಿಸುವ ಧೈರ್ಯ ಕಮ್ಯೂನಿಸ್ಟ್ ಪಾರ್ಟಿಗಾದರೂ ಇತ್ತು.

ಕಾಂಗ್ರೆಸ್ಸಿಗೂ ಕಮ್ಯೂನಿಸ್ಟರಿಗೂ ಇರುವ ವ್ಯತ್ಯಾಸ ಇದೇ ಎಂದೆನ್ನಬೇಡಿ, ಕಾಂಗ್ರೆಸ್ಸಿನ ಠಕ್ಕುತನ ಯಾವಾಗಲೂ ಸಾಕ್ಷ್ಯದೊಂದಿಗೇ ಬಯಲಿಗೆ ಬೀಳುತ್ತದೆ ಎಂಬ ಸಹಸ್ರ ನಿದರ್ಶನಗಳಲ್ಲಿ ಇತ್ತೀಚೆಗಿನದಿದೊಂದು ಎಂದೂ ಅರ್ಥವಲ್ಲವೆ ?

० ० ०

ದೇಶದಲ್ಲಿ ಲಂಚದ ಕೂಗು ಹೆಚ್ಚುತ್ತಿದೆಯೆಂದೂ ಇದರ ಸತ್ಯಾಂಶ ತಿಳಿಯಲು 'ಚಿತ್ರಗುಪ್ತ' ರನ್ನು ನಿಯಮಿಸಲಾಗುವುದೆಂದೂ ರಾಜ್ಯದ ನ್ಯಾಯಾಂಗ ಮತ್ತು ಕಾನೂನು ಸಚಿವ ಶ್ರೀ ಟಿ. ಸುಬ್ರಹ್ಮಣ್ಯಂರವರು ತುರುವೆಕೆರೆಯಲ್ಲಿ ಹೇಳಿದರೆಂದು ವರದಿ.

—ಸತ್ಯಾಂಶವೆಂದರೆ ಏನು ? ಲಂಚ ಪಡೆಯುತ್ತಿರುವುದು ಸುಳ್ಳು ಎಂದು ಇವರ ಭಾಷಣದ ಅರ್ಥವೆ ? ಲಂಚದ ಕೂಗು ಒಂದೇ ಬದಿಯಿಂದ ಬರುತ್ತಿರುವುದನ್ನು ಮಾತ್ರ ಪರಿಶೀಲಿಸಲು "ಚಿತ್ರಗುಪ್ತ" ರ ನೇಮಕವೆ ? ಆನೇಲೆ ಈ 'ಚಿತ್ರಗುಪ್ತ'ರ 'ಗುಪ್ತಚಿತ್ರ' ತೋರಿಸಲು ಯಾರ ನೇಮಕ ? ಮತ್ತೆ ಅವರ ಮೇಲೆ 'ಚಿತ್ರಗುಪ್ತ' ರೆ ? ಎಂಬ ಹಲವಾರು ಸಂದೇಹಗಳನ್ನು ಹಲವಾರು ಜನರು ಆಸಕ್ತರು ಎತ್ತುತ್ತಿದ್ದಾರೆ.

"ಚೌಚೌವಾಲಾ"

# ಕೇರಳ ಮನವಿ

ಕೇರಳದ ಮೂಲ ಪರಿಸ್ಥಿತಿಯೆಂದರೆ ಅಲ್ಲಿಯ ಜನರು ಕೇರಳ ಸರ್ಕಾರದ ಬಗ್ಗೆ ತುಂಬಾ ಅಸಂತೃಪ್ತರಾಗಿದ್ದು ಈ ಕೆಟ್ಟ ಆಡಳಿತವನ್ನು ಕೊನೆಗಾಣಿಸಬೇಕೆಂದು ಅವರ ಆಶೆಯಾಗಿದೆ. 'ಹಿಂದೂಸ್ತಾನ್ ಟೈಮ್ಸ್' ಸರಿಯಾಗಿಯೇ ಹೇಳಿದಂತೆ ಪ್ರಧಾನಿ ನೆಹ್ರೂರವರ ಹೇಳಿಕೆ (ಅಲ್ಲಿಯ) ಸರ್ಕಾರಕ್ಕೆ ಸಮಾಧಾನಕರವಾಗಿದೆಯೇ ವಿನಃ ನಮಗಾರಿಗೂ ಅಲ್ಲ. ನಾವೇನನ್ನೂ ಹೇಳುತ್ತಿಲ್ಲವಾದರೂ ಇದು ಸಂಪೂರ್ಣ ಸರಿಯಲ್ಲ

ಕಮ್ಯೂನಿಸ್ಟರು ಅಧಿಕಾರಕ್ಕೇಕೆ ಬಂದರು? ಯಾಕೆಂದರೆ ಕೇರಳದ ಜನತೆಗೆ ಮತಗಳನ್ನು ನಮಗೀಯಬೇಕೆಂಬುದೂ, ಮತದಾನ ಯಾವಾಗ ಎಂಬುದೂ ತಿಳಿಯದು. ಈಗ ಅರಚುವುದರಲ್ಲಿ ಪ್ರಯೋಜನವಿಲ್ಲ. "ತುರ್ತುಕ್ರಮ" ಎಂಬುದೇ ನಮ್ಮ ಈಗಿನ ಘೋಷಣೆಯಾಗಬೇಕು.

ಇತ್ತೀಚೆಗೆ ನಾವು ಸರಕಾರದ ವಿರುದ್ಧ ಅನೇಕ ಗಲಭೆಗಳನ್ನೂ, ಚಳವಳಗಳನ್ನೂ ನಡೆಸಿ ಯಶಸ್ವಿಗಳಾಗಿದ್ದೇವೆ. ನಮ್ಮ ಈ ಸಬಲ ತಂತ್ರಗಳಿಂದ ಪೋಲೀಸರು ಗೋಲೀಬಾರ್ ಮಾಡುವಂತೆ ಕೂಡಾ ಆಯಿತು. ಈ ಸಾಧನೆಯ ಬಗ್ಗೆ ನಾವು ಅಭಿಮಾನಪಡುತ್ತೇವೆ ಮತ್ತು ಎಲ್ಲರೂ ಇದನ್ನೇ ಅನುಸರಿಸುತ್ತಾರೆಂದು ಆಶಿಸಿದ್ದೇವೆ.

ಕಾನೂನು ಮತ್ತು ನೆಮ್ಮದಿಯ ಸ್ಥಿತಿ ಭಯಂಕರವಾಗಿದೆ. ಪೋಲೀಸರು ಕೂಡ ರಾತ್ರಿ ಕಳೆಯುವದರೊಳಗಾಗಿ ಕಮ್ಯೂನಿಸ್ಟರಾಗಿ ಕಾಂಗ್ರೆಸಿಗರನ್ನು ಥಳಿಸುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಅವರು ಕಮ್ಯೂನಿಸ್ಟರನ್ನೇ ಥಳಿಸುತ್ತಿದ್ದರು. ಈ ಆಕ್ಷೇಪಗಳಿಗೆ ಅವರ ಉತ್ತರವೆಂದರೆ ಯಾರನ್ನಾದರೂ ಹೊಡೆಯುವಲ್ಲಿ ಮಾತ್ರ ಅವರಿಗೆ ಆಸಕ್ತಿಯಂತೆ. ಹೊಡೆಯಲ್ಪಟ್ಟವರು ಕಾಂಗ್ರೆಸ್ಸಿಗರೋ, ಕಮ್ಯೂನಿಸ್ಟರೋ ಎಂಬ ಯಾವ ವ್ಯತ್ಯಾಸವೂ ಅವರಿಗಿಲ್ಲ. ಇದು ಅತ್ಯಂತ ಗಂಭೀರವಾದ ಸ್ಥಿತಿ, ತಕ್ಷಣವೇ ಪರಿಶೀಲಿಸಬೇಕಾದುದಂಥದು. ನಮ್ಮ ಮೇಲೆ ನಡೆಯುವ ಕಮ್ಯೂನಿಸಂನ ವಿಪತ್ತನ್ನೆದುರಿಸಲು ನಾವು ಸಂಪೂರ್ಣವಾಗಿ ಸಜ್ಜುಗೊಂಡವರಾಗಿದ್ದೇವೆ. ಈಗಾಗಲೇ ನಾವು ಶಿಕ್ಷಣ ಮಸೂದೆಯ ವಿರುದ್ಧ ಹೋರಾಡಿದ್ದೇವೆ. ಭೂಸುಧಾರಣಾ ಕಾನೂನಿಗೆ ವಿರೋಧವಾಗಿ ಬಲವಾಗಿ ಹೋರಾಡುತ್ತೇವೆ. ಆಡಳಿತಕ್ಕೆ ಕೈಹಚ್ಚಲು ಯಾರನ್ನೂ ನಾವು ಬಿಡಲಾರೆವು. ಆಡಳಿತ ಸುಧಾರಣಾ ಸಮಿತಿಯು ಕಮ್ಯೂನಿಸ್ಟರಿಂದಲೇ ತುಂಬಿಭಾರವಾಗಿದೆ. ಕಡಿಮೆ ಸಂಬಳದ ನೌಕರರು, ಶಾಲಾ ಶಿಕ್ಷಕರುಗಳು ಮುಂತಾದವರ ಸಂಬಳವನ್ನು ಹೆಚ್ಚಿಸುವ ಕೆಂಪು ಸರಕಾರದ ಕ್ರಮಗಳನ್ನು ಸಂಪೂರ್ಣವಾಗಿ ವಿರೋಧಿಸಿದೆವು. ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಹಾಳು ಮಾಡುವ ಮತ್ತು ಖಜಾನೆಯನ್ನು ಖಾಲೀ ಮಾಡುವ ಕುತಂತ್ರವಾಗಿದೆ ಇದು. ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಅರ್ಜಿಗಳನ್ನು ಕಳುಹಿಸುತ್ತ ಕಮ್ಯೂನಿಸ್ಟ್ ಸರಕಾರವು ಉದ್ಯೋಗ ವಿನಿಮಯದ ಸಮತೂಕ ಸ್ಥಿತಿಯನ್ನು ಅಸ್ತವ್ಯಸ್ತವಾಗಿಸುತ್ತಿದೆ. ಮಂತ್ರಿಗಳು ಜವಾಬ್ದಾರಿಯಾದ ಸ್ಥಳಗಳಿಗೆ ಚುರುಕಾದವರನ್ನು ಚುನಾಯಿಸುವುದು ಪ್ರಜಾಪ್ರಭುತ್ವದಲ್ಲಿರುವ ಕ್ರಮಕ್ಕೆ ಇದು ಅತ್ಯಂತ ಕೆಟ್ಟದ್ದಾಗಿದೆ.

ಕಮ್ಯೂನಿಸ್ಟರು ಹಿಂದಿನ ಎಲ್ಲ 'ಕನ್ವೆನ್ಷನ್'ಗಳ ಪ್ರಕಾರ ತಮ್ಮ ತಮ್ಮಲ್ಲಿ ಕಚ್ಚಾಡುತ್ತಿಲ್ಲ. ಭಾರತದಲ್ಲೇ ಈ ರಾಜ್ಯವನ್ನು ಶ್ರೇಷ್ಠ ಪ್ರಜಾಸತ್ತಾತ್ಮಕ ರಾಜ್ಯವನ್ನಾಗಿಸಿದ ಹಿಂದೂ—ಕ್ರಿಶ್ಚಿಯನ್, ನಾಯರ್—ಎಳವರ್ ಇವರುಗಳ ಕಚ್ಚಾಟ ಹಾಗೂ ಇನ್ನಿತರ ಪ್ರಜಾಪ್ರಭುತ್ವಾತ್ಮಕ ರಾಜಕೀಯದ ಚಿಹ್ನೆಗಳನ್ನೂ ಸಂಪ್ರದಾಯಗಳನ್ನೂ ಇವರು ತೊಡೆದುಹಾಕಿದ್ದಾರೆ. ಆದರೆ ನಾವು ಮಾತ್ರ ಈ ಮಶಾಲನ್ನು ಎತ್ತಿ ಹಿಡಿದು ನಡೆದಿದ್ದೇವೆ.

ಕಮ್ಯೂನಿಸ್ಟರು ಶೋಷಿತ ಕಾರ್ಮಿಕರನ್ನು ಹತ್ತಿಕ್ಕಲು ಅವರಿಗೆ ಕನಿಷ್ಠ ವೇತನವನ್ನು ಹಲವಾರು ಔದ್ಯೋಗಿಕ ಕ್ಷೇತ್ರಗಳಲ್ಲಿ ಗೊತ್ತುಮಾಡಿ, ಪಿ. ಗೋವಿಂದ ಮೆನೋನ್ ಕಾರ್ಮಿಕ ನಾಯಕರಾದ ಬಳಿಕಂತೂ

**'ಅಗಸ್ತ್ಯ'**
**ಅವರಿಂದ**

ಮೇಲಿನ ಕ್ರಮಗಳಿಂದ ಕಾರ್ಮಿಕರನ್ನು ಚಳವಳಗಳಿಂದ ನಿರ್ಬಂಧಿಸಿದ್ದಾರೆ. ಇದು ಅತ್ಯಂತ ಕೆಟ್ಟದ್ದೂ ಅಪ್ರಜಾಪ್ರಭುತ್ವಾತ್ಮಕವಾದದ್ದೂ ಆಗಿದೆ.

ಕಮ್ಯೂನಿಸ್ಟರು ಕಾನೂನು ವ್ಯವಸ್ಥೆಗಳನ್ನು ಪಣಕ್ಕಿಟ್ಟು, ನಮ್ಮ ಪರಂಪರಾಗತ ಮೌಲ್ಯಗಳಿಗೆ ದ್ರೋಹ ಬಗೆದು ಸರ್ವಾಧಿಕಾರಿಗಳಾಗಿಯೂ, ದಾನವರಂತೆಯೂ ವರ್ತಿಸಿ ದೇವಿಕೊಳಂ ಚುನಾವಣೆಯಲ್ಲಿ ವಿಜಯಿಗಳಾದರು. ನಮ್ಮ ಆ ವಿಜಯವನ್ನು ವಿರೋಧಿಸಿ ಕಾನೂನು ವ್ಯವಸ್ಥೆಗಳನ್ನು ಅಪಾಯಕ್ಕೀಡುಮಾಡಿದರು.

ಕೊಲೆಗಳೂ, ಸಾವುಗಳೂ ಕೆಲವು ನಡೆದಿವೆ. ನಿಜ, ಹಿಂದೆಯೂ ಕೂಡ ಕೆಲವು ಸಾವುಗಳೂ, ಕೊಲೆಗಳೂ ನಡೆದುವು. ಆದರೆ ಈಗ ಸತ್ತವರೆಲ್ಲ ಕಾಂಗ್ರೆಸ್ಸಿಗರೇ. ಚಿಕ್ಕ ಮಕ್ಕಳು ಕೂಡ. ಇದು ನಮ್ಮ ಜನಪ್ರಿಯತೆಯನ್ನು ತೋರಿಸುತ್ತಿದ್ದರೆ ಇನ್ನೊಂದೆಡೆ ಕಮ್ಯೂನಿಸ್ಟರ ಅಸಹಿಷ್ಣುತೆಯನ್ನು ತೋರಿಸುತ್ತದೆ.

ತಮ್ಮ ಸಚಿವ ಸಂಪುಟದಲ್ಲಿ ಒಬ್ಬ ಮಂತ್ರಿಯನ್ನು ಕೂಡ ಬದಲಾಯಿಸದೆ ಕಮ್ಯೂನಿಸ್ಟರು ಈಗ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಅಧಿಕಾರದಲ್ಲಿರುವರು. ಹಿಂದೆ ಇಂಥದು ನಡೆಯಲಿಲ್ಲ ಮತ್ತು ಇವರು ಚೀನಾ ದಾರಿಯನ್ನನುಸರಿಸುತ್ತಿರುವದನ್ನು ತೋರಿಸುತ್ತದೆ.

ಇಬ್ಬರು ಸ್ವತಂತ್ರ ಸಚಿವರುಗಳು ಈಗಲೂ ಕೂಡ ಕಮ್ಯೂನಿಸ್ಟ್ ಮಂತ್ರಿ ಮಂಡಲದಲ್ಲಿರುವರು. ಇದು ಸಂಪೂರ್ಣ ಅಪ್ರಜಾಸತ್ತಾತ್ಮಕವಾಗಿದ್ದು ಕೆಂಪು ಸರಕಾರ ಅಂತರ್ಯುದ್ಧದ ಬಗ್ಗೆ ಯೋಚಿಸುತ್ತಿರುವದನ್ನು ತೋರಿಸುತ್ತದೆ.

ವಿದ್ಯಾರ್ಥಿಗಳು ರಾಜಕೀಯ ಹೋರಾಟದಲ್ಲಿ ಭಾಗವಹಿಸದಂತೆ ಕಮ್ಯೂನಿಸ್ಟರು ಪ್ರೋತ್ಸಾಹನೆ ನೀಡುತ್ತಿಲ್ಲ. ನಾವು ಏ

ನು ಹೇಳುತ್ತಿ
ಸ್ಟರು ಮಾಡ
ನುಡಿಗಳನ್ನು
ಯದಲ್ಲ.

ನಾವು ದೆ
ಧಿಯಲ್ಲಿ ಕಮ
ಯಗಳನ್ನೆಲ್ಲ
ಕಡೆಗೆ 144ನೆ
ದು ಹಾಕಿದ್ದಾ
ಕೆಲಸ ಅವರ
ನಮ್ಮ ಬಗ್ಗೆ ಅ
ತೋರಿಸುತ್ತದೆ

ಬಂಧಿಸಿದ
ರು ಬಿಡುಗಡೆ
ಯಾಂಗದಲ್ಲಿ ಹ
ಯಾಕೆಂದರೆ
ಸಾಧ್ಯವಿದ್ದಷ್ಟು
ಬೇಕು. ಪ್ರಜಾ
ಇಂಥದೇ ನಡೆ

ಇದೆಲ್ಲ ಇರ
ಕೊಂಚ ಸಹಾ
ತ್ರೇವೆ. ಆಥಾ
ಕಿತ್ತೊಗೆಯಲು
ಆದಾಗ್ಯೂ ನಾ
ವನ್ನು ಆಶಿಸಬಾ

ರಾಷ್ಟ್ರಾಧ್ಯಕ್ಷ
ಲ್ಪಡಬೇಕು.
ಕಾಪಾಡಲು ಇ
ತ್ವಾತ್ಮಕ ಕ್ರಮ
ದಾರರ ಪ್ರೀತಿಯ
ಬಹುದು. ಪ್ರ
ಗೆ ಚಿತ್ರೈಸಿ ನವ
ಬಹುದು. ಅ
ರ್ಪಡಿಸುವುದು
ವಾದ ಕೆಲಸವಾ

ಈ ವಿನಯಪ
ದ್ದರೆ ಬೇರೆ-ದಾ

(೯ನೇ

## ಚುಟುಕ

### ಧರ್ಮಲಂಡ

"ನಾವೆಲ್ಲರು
ದೇವನಂಶ
ಎಂಬ ಸ್ವಾವಿ
ವೇಕೆ ನಿಮ್ಮ
—ಎಂದೊಡೆ
'ಧರ್ಮಲಂಡ

### ಅರುಣೋದಯ

ಕತ್ತಲು ಕಟ್ಟ
ಪಡುವಲ ಕ
ಕೌತು
ಕಣ್ಣ
ಮೂಡಣದಲ

# ಕೇರಳದ ವಿಚಾರಣೆ ಅರ್ಥವಿಲ್ಲದ ಮಾತು

**ಕೇ**ರಳದ ಪರಿಸ್ಥಿತಿಯ ಬಗ್ಗೆ ವಿಚಾರಣೆ ನಡೆಯಬೇಕೆಂದು ಪ್ರಧಾನಿ ಸೂಚಿಸಿರುವರೆಂದಾದ ಪತ್ರಿಕಾ ವರದಿಗಳಿಗೆ ಉತ್ತರ ಕೊಡುತ್ತ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ್ ಘೋಷ್‌ರವರು ಕಮ್ಯೂನಿಸ್ಟ್ ಪಾರ್ಟಿಯು ಈ "ವಿಚಾರಣೆ"ಗೆ ಒಪ್ಪಲಿಲ್ಲವೆಂದು ತ್ರಿವೇಂದ್ರಮ್‌ನಲ್ಲಿ ಸೇರಿದ್ದ ಪಾರ್ಟಿ ಕಾರ್ಯಕಾರಿ ಸಮಿತಿಯ ಸಭೆಯ ಬಳಿಕ ತಿಳುಹಿಸಿದರು.

"ವಿಚಾರಣೆಯ ಪ್ರಶ್ನೆಯೇ ಏಳುವದಿಲ್ಲ" ಎಂದು ಶ್ರೀ ಘೋಷ್ ಹೇಳಿದರು. "ವಿದ್ಯಾರ್ಥಿ ಚಳುವಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆಯೂ ತನಿಖೆಯನ್ನು ನಡೆಸಲಾಗುವುದು ಎಂದು ಕೇರಳ ಸರ್ಕಾರ ಪ್ರಕಟಿಸಿದ ಮೇಲೆಯೇ ಈ ವಿಚಾರಣೆಯ ಮಾತು ಬಂದಿರುವುದು ಅರ್ಥಪೂರ್ಣವಾಗಿದೆ. ಯಾಕೆಂದರೆ ಈ ತನಿಖೆ ಅವರಿಗೆ ಕೀರ್ತಿ ತಾರದ ಅನೇಕ ವಿಷಯಗಳನ್ನು ಹೊರಗೆಡುವುದೆಂಬ ಭಯವಿರುವುದರಿಂದ, ಈ ತನಿಖೆಯನ್ನು ತಪ್ಪಿಸುವುದು ಕಾಂಗ್ರೆಸ್ ನಾಯಕರುಗಳಿಗೆ ಬೇಕಾಗಿದೆ ಎಂದು ನನಗೆನಿಸುತ್ತದೆ. ಕೇಂದ್ರದಿಂದ "ವಿಚಾರಣೆ" ನಡೆಯಲಿ ಎಂಬ ಯೋಚನೆಯಿಂದ ಅವರು ಈಗಿನ ಪೇಚಾಟದ ಪರಿಸ್ಥಿತಿಯಿಂದ ಒಂದು ದಾರಿಯನ್ನು ಕಂಡುಕೊಳ್ಳಬಹುದು.

"ನಮ್ಮಲ್ಲಿ ತಪ್ಪಿಲ್ಲವೆಂದು ಯಾರೂ ಹೇಳಲಿಕ್ಕಿಲ್ಲ, ಆದರೆ ಇಂದಿನ ಪರಿಸ್ಥಿತಿಯ ಮೂಲ ಹೊಣೆಗಾರಿಕೆ ಕೇರಳ ಕಾಂಗ್ರೆಸ್ ನಾಯಕರ ಹಾಗೂ ಇನ್ನುಳಿದ ವಿರೋಧ ಪಕ್ಷಗಳ ಮೇಲೆಯೇ ಇದೆಯೆಂದು ನಾವು ಹೇಳಲೇಬೇಕು. ಯಾಕೆಂದರೆ ಪ್ರತಿಯೊಂದು ವಿಷಯವನ್ನು ಅದು ಹೇಗೆ ಹುಟ್ಟಲಿ, ರಾಜಕೀಯಕ್ಕೆ ಬಳಸಿಕೊಂಡು, ಅವು ಸರಿಯಾಗಿ ಇತ್ಯರ್ಥವಾಗದಂತೆ ಮಾಡುವುದು ಬೇಕಾಗಿದೆ."

ಇದಕ್ಕೊಂದು ನಿದರ್ಶನವನ್ನು ಕೊಡುತ್ತ ಶ್ರೀ ಘೋಷರು ಸೀತಾರಾಂ ಗಿರಣಿ

## ಕಾ|| ಅಜಯ ಘೋಷ್‌ರವರ ಹೇಳಿಕೆ

ವಿಷಯವನ್ನು ಹೇಳಿದರು: "ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ, ಹಿಂದೆ ಪಡೆಯುತ್ತಿರುವ ಸಂಬಳದ ಮೇಲೆಯೆ ತಾತ್ಕಾಲಿಕವಾಗಿ ಐದು ಜನ ಕೆಲಸಗಾರರನ್ನು ವರ್ಗಾಯಿಸಲಾಯಿತು. ಆದರೆ ಇಷ್ಟರಿಂದಲೇ ಅವರು ಏನೇನೋ ಮಹಾ ಮಾಡಿಬಿಟ್ಟರು. ಹೊರಗಿನಿಂದ ಜನಗಳನ್ನು ತಂದು ಹೋರಾಟಗಳನ್ನು ಹುಟ್ಟಿಸಿದರು. ಇದೊಂದು ಉದಾಹರಣೆ, ಇಂಥವು ಬೇಕಾದಷ್ಟಿದೆ."

ಅಖಿಲ ಭಾರತ ಕಾಂಗ್ರೆಸ್ ನಾಯಕತ್ವವು ಕೇರಳ ಸರ್ಕಾರದ ಬಗ್ಗೆ ಹೇಗಿದೆ ಎಂಬುದನ್ನು ಹೇಳುತ್ತ ಶ್ರೀ ಘೋಷರು ಕೇರಳ ಸರ್ಕಾರದ ಶಾಸನ ಹಾಗೂ ಆಡಳಿತ ಕ್ರಮಗಳು ಬೇರೆ ರಾಜ್ಯಗಳ ಮೇಲೆ ಪ್ರಭಾವ ಬೀರಿವೆ. ಕಾಂಗ್ರೆಸ್ ನಾಯಕರಿಗೆ ಪಾಠಹೇಳಿವೆ. ಕೇರಳದಲ್ಲಾದ ಸರ್ಕಾರಿ ನೌಕರರ ವೇತನಗಳ ಪುನರ್ ಪರಿಶೀಲನೆಯ ಪ್ರಮಾಣಗಳು ಹೊರಗಡೆಗೆ ಮೆಚ್ಚಿಗೆ ಪಡೆದುವು, ಬೆಂಬಲ ಪಡೆದುವು. ಉತ್ತರ ಪ್ರದೇಶದ ಕಾಂಗ್ರೆಸ್ ಪಕ್ಷದ ಶಾಸನ ಸಭೆಯ ಕಾರ್ಯದರ್ಶಿಕೂಡ ಹಾಗೂ ಬೇರೆ ರಾಜ್ಯಗಳ ಕಾಂಗ್ರೆಸ್ ಆಡಳಿತಗಾರರು ಕೂಡ ಮೆಚ್ಚಿಗೆ ವ್ಯಕ್ತಪಡಿಸಿದರು.

"ಕಮ್ಯೂನಿಸ್ಟ್ ಮಂತ್ರಿ ಮಂಡಳದ ವಿರುದ್ಧ ಕಾಂಗ್ರೆಸ್ಸಿಗಿರುವ ಪಕ್ಷಪಾತೀ ಭಾವನೆಗಳಿಗೆ ಕಾರಣವೆಂದರೆ ಕಾಂಗ್ರೆಸ್ಸು ತನ್ನ ಚುನಾವಣಾ ಘೋಷಣೆಯಲ್ಲಿ ಹೇಳಿದುದನ್ನು ಕಾರ್ಯಗತವಾಗಿಸಲು ಕಮ್ಯೂನಿಸ್ಟರು ಯತ್ನಿಸುತ್ತಿರುವದೇ ವಾಸ್ತವಿಕವಾದ ಕಾರಣವಾಗಿದೆ."

"ಕಾಂಗ್ರೆಸ್ಸಿಗರ ಮೇಲೆ ಪ್ರಭಾವ ಪರಿಣಾಮಗಳನ್ನು ಬೀರುತ್ತಿರುವುದು ನಮ್ಮದೇ ಪ್ರಥಮ ಸರಕಾರವಾಗಿರುವುದು ಅವರ ಮಹತ್ಸರಪೂರ್ಣ ಮನೋಭಾವನೆಗಳಿಗೆ ಕಾರಣವಾಗಿರುವುದು ಸತ್ಯಸಂಗತಿ. ಉದಾಹರಣೆಗೆ– ಪ್ರಧಾನಿ ಆದೆಷ್ಟುಸಲ ಹೊಲಗಳಿಂದ ರೈತರನ್ನು ಹೊರಹಾಕುವದನ್ನು ಖಂಡಿಸಿದ್ದಾರೆ. ಅದರೂ ಅದೆಲ್ಲ ಹಾಗೇ ಮುಂದೊರೆದಿದೆ. ಹೊಲಗಳಿಂದ ರೈತರನ್ನು ಹೊರಹಾಕುವದನ್ನು ಪ್ರಥಮವಾಗಿ ನಿಷೇಧಿಸಿದದು ನಮ್ಮದೇ ಸರ್ಕಾರವಾಗಿದೆ. ಇದು ಕೇರಳವನ್ನೊಳಗೊಂಡು ಎಲ್ಲಾ ರಾಜ್ಯಗಳಲ್ಲೂ ಕಾಂಗ್ರೆಸ್ಸಿಗೆ ಪೇಚಾಟವನ್ನು ತಂದಿಕ್ಕಿದೆ. ಇಂಥ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು."

"ಕೇರಳ ಸರ್ಕಾರವು ವ್ಯವಸ್ಥಾಯ ಮಸೂದೆಯನ್ನು ತಂದು ಅಂಗೀಕರಿಸಿದಾಗ ಆಸಕ್ತ ಭಾಗಗಳವರು ಸರಕಾರದ ವಿರುದ್ಧ ಉದ್ದೇಶ ಪೂರ್ವಕವಾಗಿ ಟೀಕಿಸಿದುದನ್ನು ಕಾಣಬಹುದು. ಕಾಂಗ್ರೆಸ್ ನಾಯಕರುಗಳೇ ಸ್ವತಃ ಈ ಮಸೂದೆಯನ್ನು ವಿರೋಧಿಸಿ ಇದನ್ನು ಪ್ರತಿಭಟಿಸಬೇಕೆಂದು ಸಾರಿದರು. ಆದರೆ ಜನತೆಯ ತುಂಬಿ ತುಳುಕುವ ಬಹುಮತ ಸರಕಾರಕ್ಕೆ ಬೆಂಬಲ ನೀಡುವುದೆಂದು ಖಾತ್ರಿ ನನಗಿದೆ.

# ನೀವೇನು ಹೇಳುತ್ತೀರಿ

## ಏನೆಲ್ಲ ನಡೆದಿದೆ ! ?

ನಮ್ಮ ರಾಜ್ಯದ ಪಕ್ಕದಲ್ಲಿರುವ ನಮಗೆ ಗಡಿಯಾಗಿರುವ ಗೋವಾದ ಒಳಗಡೆ ಏನು ನಡೆದಿದೆ ? ಏನೆಲ್ಲ ನಡೆದಿಲ್ಲ ! ?

○ ವಿದ್ಯಾರ್ಥಿಗಳ ಎಕ್ಸರ್‌ಸೈಜ್ ಪುಸ್ತಕಗಳನ್ನೆಲ್ಲ ಪರೀಕ್ಷಿಸಲಾಗುತ್ತದೆ. 'ಆಕ್ಷೇಪಾರ್ಹ' ಬರೆಹಗಳೇನಾದರೂ ಕಂಡುಬಂದರೆ ಆ ವಿದ್ಯಾರ್ಥಿ ಓದುವ ಸ್ಕೂಲಿಗೆ 1,000 ರೂ. ದಂಡ ವಿಧಿಸಲಾಗುವುದು. ಆಕ್ಷೇಪಾರ್ಹ ವಿಷಯಗಳು: **ಸ್ವಾತಂತ್ರ್ಯ, ಸ್ವರಾಜ್ಯ** ಶಬ್ದಗಳು ಅಥವಾ ಅವುಗಳನ್ನು ಕುರಿತ ಪ್ರಬಂಧಗಳು, ಅಥವಾ **ನೆಹ್ರೂ, ಗಾಂಧಿ** ಮುಂತಾದವರ ಹೆಸರುಗಳು.

○ ಇದಕ್ಕಾಗಿಯೇ ಒಬ್ಬ ವಿಶೇಷ ಇನ್ಸ್‌ಪೆಕ್ಟರರ ನೇಮಕವಾಗಿದ್ದು ಅವರು ಯಾವಾಗ ಬೇಕಾದಾಗ ಹಠಾತ್ತಾಗಿ ಪ್ರವೇಶಿಸಿ ವಿದ್ಯಾರ್ಥಿಗಳ ಪುಸ್ತಕ, ಎಕ್ಸರ್‌ಸೈಜ್, ಸ್ಕೂಲು ಎಲ್ಲವನ್ನೂ ಪರೀಕ್ಷಿಸುತ್ತಾರೆ.

○ ಇಂಗ್ಲೀಷ್ ಬೋಧಿಸಲ್ಪಡುವ ಶಾಲೆಗಳಿಲ್ಲದರಿಂದ ಇಂಗ್ಲೀಷನ್ನು ತೆಗೆದು ಪೋರ್ಚುಗೀಸ್ ಭಾಷೆಯನ್ನು ಹೇರಲಾಗುವುದು. ಕಾಗದ ಪತ್ರಗಳನ್ನೆಲ್ಲ ಪೋರ್ಚುಗೀಸ್ ಭಾಷೆಗೆ ಅನುವಾದಿಸುವ ಕಾರ್ಯಕ್ಕೆ ಆಜ್ಞೆಯಾಗಿದೆ. 90 ದಿನಗಳಲ್ಲಿ ಇದು ಮುಗಿಯಬೇಕೆಂದು ಹೇಳಲಾಗಿದೆ.

○ ಶಾಲೆಗಳನ್ನೆಲ್ಲ ಸಿಮೆಂಟಿನಿಂದ ಕಟ್ಟಿಸಿ ಸುತ್ತಲೆಲ್ಲ ನೀರಿನ ಆಧುನಿಕ ಕಂದರಗಳನ್ನು ರಚಿಸಲಾಗುವುದು. ಇದಕ್ಕಾಗಿ ಹಣವನ್ನು ದಂಡದಿಂದ ಪಡೆಯಲಾಗುವುದು.

○ ಶಾಲೆಗಳಲ್ಲಿರುವ ಸ್ಕೌಟ್‌ಗಳೆಲ್ಲ ತುಟ್ಟಿ ಬೆಲೆಯ ಖಾಕೀ ಬಟ್ಟೆಯನ್ನೇ ಕೊಳ್ಳಬೇಕೆಂದೂ ವಿಧಿಸಲಾಗಿದೆ. ಪಾಕಿಸ್ತಾನದಿಂದ ಈ ಖಾಕೀ ಬಟ್ಟೆಯನ್ನು ಪಡೆಯಲಾಗಿದ್ದು ಸದ್ಯ ಗೋವಾದಲ್ಲಿ ಸಿಕ್ಕುವ ಜಪಾನೀ ಖಾಕಿ ಬಟ್ಟೆಯ ಎರಡರಷ್ಟು ಬೆಲೆ ಇದಕ್ಕಿದೆ.

○ ಪೂನಾ ಎಸ್. ಎಸ್. ಸಿ. ಬೋರ್ಡಿನ ಪರೀಕ್ಷೆಗೆ ಕಟ್ಟುವ ಈ ಸುಮಾರು 40 ಇಂಗ್ಲೀಷ್ ಮಾಧ್ಯಮಿಕ ಶಾಲೆಗಳು ಈ ನಿರ್ಬಂಧನೆಗಳು ಹೀಗೇ ಬಲವಾಗಿ ಮುಂದುವರಿದರೆ ಮುಚ್ಚಬೇಕಾಗುತ್ತದೆ.

○ ಗೋವಾದಲ್ಲಿರುವ ಸೈನಿಕ ಸಂಖ್ಯೆ 25,000 ಎಂದು ಅಂದಾಜಾಗಿದೆ. ಈ ಸೈನಿಕ ವ್ಯವಸ್ಥೆಗೆ ಗೋಮಾಂತಕರು ಹೆಚ್ಚಿನ ತೆರಿಗೆಗಳನ್ನು ತೆರಬೇಕಾಗಿದೆ. ರೂ. 1,800ನ್ನು ವಾರ್ಷಿಕ ಉತ್ಪಾದನೆಯಿರುವವರೆಲ್ಲ ಶೇ. 110ರಷ್ಟು ಕೊಡಬೇಕು ! ಒಬ್ಬ ಸಣ್ಣ ಅಂಗಡಿಯವನು ಒಂದು ವರುಷಕ್ಕೆ ರೂ. 1,280ಗಳನ್ನು ಸರಕಾರಕ್ಕೆ ಸುಂಕ ಕೊಡಬೇಕಾಗಿದೆ. ಗೋವಾದಲ್ಲಿ ವಾಸಿಸುವ ಗೋಮಾಂತಕರಲ್ಲದವರು ಒಂದು ವರುಷಕ್ಕೆ ರೂ. 35—8 ತಲೆಗಂದಾಯ ಕೊಡಬೇಕು. ಜನವರಿಯಿಂದ ಈಗ ಚಲಾವಣೆಯಲ್ಲಿರುವ ಕರೆನ್ಸಿಗಳು ಚಲಾವಣೆಗೆ ಬರುವುವು. ಗೋವೆಯ ರೂಪಾಯಿಗೆ ಆಗ ಏನೇನೂ ಬೆಲೆ ಇರುವುದಿಲ್ಲ.

○ ಗೋವಾದ ಗಣಿಗಳಲ್ಲಿ ನಡೆಯುವ ಆಕಸ್ಮಿಕ ಅನಾಹುತಗಳಿಗೆ ವಿಧಿಸುವ ದಂಡ ಪ್ರಪಂಚದಲ್ಲೇ ವಿಚಿತ್ರವಾಗಿವೆ. ಇತ್ತೀಚೆಗೆ ಇಂಥದೊಂದು ಆಕಸ್ಮಿಕದ 50 ಜನ ಕಾರ್ಮಿಕರು ಮಣ್ಣಲ್ಲಿ ಹೂಳಿಹೋದರು. ಮೂವರು ಮಾತ್ರ ಅದು ಹೇಗೋ ಬದುಕಿಕೊಂಡರು. ಈ ಮೂವರಿಂದಲೇ ಆಕಸ್ಮಿಕವಾಯಿತೆಂದು ಹೇಳಿ ಮೂವರಿಗೂ ಒಟ್ಟು 15,000 ರೂ. ದಂಡ ವಿಧಿಸಲಾಯಿತು.

ಭಾರತದ ಎದೆಯಲ್ಲಿ ಮುರಿದಿರುವ ಈ ಪೋರ್ಚುಗೀಸ್ ಮುಳ್ಳನ್ನು ಯಾರು ಎಂದು ಕಿತ್ತಾರು ?

## ಯಾರು ಅಪರಾಧಿಗಳು ?

ಕೇರಳದಲ್ಲಾದ ಗೋಲಿಬಾರ್ ಬಗ್ಗೆ ಏನೋ ಮಹಾ ಪ್ರಪಂಚಪ್ರಳಯವೇ ಆದಂತೆ ಕಾಂಗ್ರೆಸ್ ಮಹಾಜನರೆಲ್ಲ ಮಾತನಾಡಿದರು, ವರ್ತಿಸಿದರು.

"ಕಮ್ಯೂನಿಸ್ಟ್ ಸರಕಾರ ಪೋಲೀಸ್ ಶಕ್ತಿಯನ್ನು ನಿರ್ವೀರ್ಯಗೊಳಿಸುತ್ತಿದೆ, ಅವರನ್ನು ತಟಸ್ಥ ಶಕ್ತಿಯನ್ನಾಗಿಸುತ್ತಿದೆ" ಎಂದು ಕಾಂಗ್ರೆಸ್ ಪ್ರಭೃತಿಗಳು ವಾದಿಸಿದ್ದು ನಿಮಗೆ ಜ್ಞಾಪಕವಿರಬೇಕು. ಆದರೆ ಸರಕಾರದ ವಿರುದ್ಧ ಎಷ್ಟೇ ಅಸಹ್ಯವಾದ, ಹಿಂಸಾತ್ಮಕ ಕಾರ್ಯಾಚರಣೆಗಳು ನಡೆದರೂ ಸರಕಾರ ಪೋಲೀಸ್ ಶಕ್ತಿಯನ್ನು ಬಳಸದೆ ಸುಮ್ಮನೆ ಇದ್ದಿತು. ಹದಿನಾರು ತಿಂಗಳುಗಳ ದೀರ್ಘ ಅವಧಿಯ ಬಳಿಕವಾದರೂ ಪ್ರತಿಪಕ್ಷಗಳವರು ಗೋಲೀಬಾರ್ ಆಗುವಂತೆ ಪರಿಸ್ಥಿತಿಯನ್ನು ಸೃಷ್ಟಿಸಿದರು. ದುರಾದೃಷ್ಟಕರ ಘಟನೆ ನಡೆಯಿತು. ಕಮ್ಯೂನಿಸ್ಟರನ್ನೊಳಗೊಂಡು ಎಲ್ಲರಿಗೂ ವಿಷಾದವಾಯಿತು.

ಆದರೆ ಕಾಂಗ್ರೆಸ್ ಸರ್ಕಾರ ಸ್ವಾತಂತ್ರ್ಯ ಬಂದ ಬಳಿಕ ಈ ಒಟ್ಟು ೧೧ ವರ್ಷಗಳಲ್ಲಿ 936 ಸಲ ಗೋಲಿಬಾರ್ ನಡೆಸಿ, 4,789 ಜನರನ್ನು ಕೊಂದಿದೆ. ಆಗಿನಿಂದಲೂ ಒಂದೇಸಮನೆ ಪ್ರಧಾನಿಯಾಗಿರುವ ನೆಹ್ರೂ ತಮ್ಮ ಆಳ್ವಿಕೆಯಲ್ಲಿಯ ದುರ್ಘಟನೆಗಳ ಬಗ್ಗೆ ಚಕಾರವೆತ್ತಲಿಲ್ಲ, ಕಾಂಗ್ರೆಸ್ ಸರ್ಕಾರಗಳಿಗೆ ಬುದ್ಧಿ ಹೇಳಲಿಲ್ಲ, ಅವರೆಲ್ಲ ಇವಕ್ಕಿಂತಲೂ ಸಹಸ್ರ ಪಾಲು ಹೆಚ್ಚಿನ ಅಪರಾಧಗಳಿಗೊಳಗಾಗಿದ್ದರೂ ಈಗ ....

## ಅಂತರ್ಯುದ್ಧದ ಮಾತಲ್ಲ....!

ಕೇರಳದ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್ ನಂಬೂದಿರಿಪಾದ್ ಅವರು ಕೊಯಮುತ್ತೂರಿನಲ್ಲಿ ಮಾಡಿದ ಭಾಷಣದ ಬಗ್ಗೆ 'ಅಂತರ್ಯುದ್ಧದ ಮಾತು' ಎಂದು ಭಾರೀ ಪ್ರಚಾರವೇ ನಡೆಯಿತು. 'ಚೀನಾ' ಮತ್ತು 'ಚೀನಾದ ಪರಿಸ್ಥಿತಿ' ಎಂಬ ಮಾತುಗಳು ಸೇರಿದುದೇ ಇದಕ್ಕೆ ಕಾರಣ. ಅವರು 'ಅಂತರ್ಯುದ್ಧದ ಮಾತನ್ನೇ ಆಡಿದರು ಎಂದು ತಾತ್ಕಾಲಿಕವಾಗಿ ಒಪ್ಪಿಕೊಳ್ಳೋಣ. ಇಲ್ಲಿ ಇನ್ನೊಂದು ನಿದರ್ಶನವಿದೆ. ಇದನ್ನೂ ಓದಿ.

ಕೇಂದ್ರದ ರೈಲ್ವೆ ಖಾತಾ ಸಚಿವ ಶ್ರೀ ಜಗಜೀವನರಾಮ್‌ರವರು ಇತ್ತೀಚೆಗೆ ವೆ

(ಕೊನೇ ಪುಟ ನೋಡಿ)

ಇದು ಲೇಖನವಲ್ಲ, ಕಟ್ಟು ಕಥೆಯಲ್ಲ, ಒಂದು ಕೆಟ್ಟ ಸತ್ಯ ಕತೆ

# ಮಂತ್ರಿಗಳ ಮುಂಗೋಪಿತನ

ಪ್ರಜಾರಾಜ್ಯದಲ್ಲಿ ಪ್ರಜಾಮಂತ್ರಿಗಳು, ಪ್ರಜೆಗಳ ಕುಂದುಕೊರತೆಗಳನ್ನು ವಿಚಾರಿಸಿಕೊಳ್ಳುವ ನಿದರ್ಶನವನ್ನು ಇಲ್ಲಿ ಕೊಡಬಯಸುತ್ತೇನೆ. ಇದು ಕಟ್ಟುಕಥೆಯಲ್ಲ ಕಣ್ಣಲ್ಲಿ ಕಂಡುದನ್ನು ಕಿವಿಯಲ್ಲಿ ಕೇಳಿದ್ದನ್ನು ಸ್ವಲ್ಪವೂ ಉತ್ಪ್ರೇಕ್ಷೆ ಮಾಡದೆ ಬರೆಯುತ್ತಿದ್ದೇನೆ. ನಾನು ಇಲ್ಲಿ ಕೊಡುತ್ತಿರುವ ಉದಾಹರಣೆಯನ್ನು ಕೆಲವರು ಉಪೇಕ್ಷೆ ಮಾಡಬಹುದು, ಆದರೆ ಅದರಿಂದಾಗಿ ಜನರ ಮನಸ್ಸಿನ ಮೇಲಾದ ಪರಿಣಾಮವನ್ನು ಮಾತ್ರ ನಿರ್ಲಕ್ಷಿಸುವಂತಹದಲ್ಲ.

ಆಗಸ್ಟ್ ತಿಂಗಳು ಶುಕ್ರವಾರ ದಿನ ಎಂಟನೇ ತಾರೀಖು ಮಧ್ಯಾಹ್ನ 2 ಗಂಟೆಗೆ ಮೈಸೂರು ಸರ್ಕಾರದ ಮರಾಮತ್ ಶಾಖಾ ಸಚಿವರು ಹೊಳೆಹನಸವಾಡಿ ಗ್ರಾಮಕ್ಕೆ ಬೇಟಿಕೊಡುವರೆಂದು ಗ್ರಾಮಸ್ಥರು ತಿಳಿಸಿದರು. ಗ್ರಾಮಸ್ಥರ ಕೋರಿಕೆಯಂತೆ ನಾನು ಆ ದಿವಸ 11 ಗಂಟೆಗೆ ಹಳ್ಳಿಗೆ ಹೋಗಿ ಮನವಿ ಪತ್ರ ಬರೆದುಕೊಟ್ಟೆ. ಮನವಿ ಪತ್ರದಲ್ಲಿ "ಈ ಗ್ರಾಮದ 600 ಜನರು ಒಂದೇ ಕಡೆ ನೆಲೆಸಲು ಸಾಕಾಗುವಷ್ಟು ಸ್ಥಳವನ್ನು ಕೊಡಬೇಕು. ಹಾಗೂ ಸ್ಥಾನ ಪಲ್ಲಟನೆಯ ಕಾರ್ಯ ವಿಳಂಬವಾಗಬಾರದು. ವಿಳಂಬವಾಗುವುದಾದರೆ ನಾವು ಈ ಗ್ರಾಮದಲ್ಲಿಯೆ ವಾಸಮಾಡಲು ಅನುಕೂಲತೆಗಳನ್ನು ಸರಕಾರ ಕಲ್ಪಿಸಿಕೊಡಬೇಕು" ಎಂಬುದಾಗಿ ಬರೆಯುತ್ತಿರುವ ಮನವಿಪತ್ರ ಸಿದ್ಧವಾಗುವ ಮೊದಲೇ, ಗ್ರಾಮಸ್ಥರು ಊರಿನ ಮಧ್ಯದಲ್ಲಿ ಸುಂದರವಾದ ಚಪ್ಪರವನ್ನು ಮುಗಿಸಿದ್ದರು. ಹಿಂದಿನ ರಾತ್ರಿಯೇ ಊರನ್ನೇ ತಳಿರು ತೋರಣಗಳಿಂದ ಅಲಂಕರಿಸಿದ್ದರು. ಮಧ್ಯಾಹ್ನ 3 ಗಂಟೆಯೂ ಆಯಿತು. ಮಂತ್ರಿಗಳು ಬರಲಿಲ್ಲ, ಬರುವ ಸೂಚನೆಯೂ ಕಾಣಲಿಲ್ಲ. ಕತ್ತಲಾಯಿತು. ಮಂತ್ರಿಗಳ ಆಗಮನವನ್ನು ಕಾಯುತ್ತ ಊರಿನ ರೈತ ಬಾಂಧವರೆಲ್ಲಾ ಕುಳಿತ್ತಿದ್ದರು. ಅಂತೂ ರಾತ್ರಿ 7½ ಗಂಟೆಗೆ ಸರಿಯಾಗಿ ಸುಮಾರು 20 ಕಾರುಗಳು ವಾಯುವೇಗದಲ್ಲಿ ಬಂದು ನಿಂತವು. ಗ್ರಾಮಸ್ಥರೆಲ್ಲಾ ದಾರಿಯುದ್ದಕ್ಕೂ ನಿಂತು ಸ್ವಾಗತ ನೀಡಿದರು.

ಮಂತ್ರಿಗಳು ಕಾರಿನಿಂದ ಇಳಿಯುವ ಮೊದಲೇ, ಜೊತೆಯಲ್ಲಿದ್ದ ಮಾಜಿ ಮಂತ್ರಿಯೊಬ್ಬರು "ಅವರು ಬಳಲಿದ್ದಾರೆ, ಯಾರೂ ಹೆಚ್ಚಿಗೆ ಸಂಭಾಷಣೆ ಮಾಡಕೂಡದೆಂದು" ಆಜ್ಞೆ ಮಾಡಿದರು. ಅಂಗರಕ್ಷಕರೋಪಾದಿಯಲ್ಲಿದ್ದ ಪಕ್ಕದಲ್ಲಿಯೇ ನಿಂತಿದ್ದ ಮಾಸಿದ ಬಟ್ಟೆಯ ಪುಢಾರಿಯೊಬ್ಬ ಗ್ರಾಮದ ಹುಡುಗನ ಕೈಯಲ್ಲಿದ್ದ ಮನವಿ ಪತ್ರ ಕಿತ್ತುಕೊಂಡು "ಓದುವ ಅಗತ್ಯವಿಲ್ಲ ಬಾಯಲ್ಲಿ ಓದಿದರೆ ಸಾಕು" ಎಂದು ತಿಳಿಸಿದ. ಚಪ್ಪರದೊಳಗೆ ಮಂತ್ರಿಗಳೇನೋ ಬಂದರು. ಆದರೆ ಹೊತ್ತು ತಂದಿದ್ದ ಕಾರುಗಳು, ಬಂದಿದ್ದ ಶಾಸನಸಭಾ ಸದಸ್ಯರು, ಅಧಿಕಾರಿಗಳು ಮತ್ತು ಪುಡಾರಿಗಳು ಮಂತ್ರಿಯ ಸುತ್ತಲೂ ಕೋಟೆಯನ್ನೇ ಕಟ್ಟಿದರು. ನಾನು ದೂರನಿಂತು ನೋಡುತ್ತಿದ್ದೆ. ಒಬ್ಬ ಮುದಿವಯಸ್ಸಿನ ಗ್ರಾಮಸ್ಥನನ್ನು ಯಾರೊ ಪುಢಾರಿ ಕೋಟೆಯೊಳಗೆ ಎಳೆದುಕೊಂಡ. ಮಂತ್ರಿಗಳು ಕಣ್ಣಿಗೆ ಕಾಣದಿದ್ದರೂ ಅವರಾಡುವ ಮಾತು ಕಿವಿಗೆ ಸ್ಪಷ್ಟವಾಗಿ ಕೇಳುತಿತ್ತು. "ನಿಮ್ಮ ಕಣ್ಣಿಗೆ ಪೊರೆ ಬಂದಿದೆ. ಸರ್ಕಾರ ಜನತೆಗಾಗಿ ಮಾಡುತ್ತಿರುವ ಕೆಲಸವನ್ನು ನೋಡಲು ಆ ಪೊರೆ ಅಡಚಣೆಯಾಗಿದೆ. ಅಪ್ಪ ನೆಟ್ಟ ಆಲದ ಮರಕ್ಕೇ ಜೋತು ಬಿದ್ದೆ ತೀರುತ್ತೇವೆಂದರೆ ನಮ್ಮ ಅಕ್ಷೇಪಣೆ ಏನೂ ಇರುವುದಿಲ್ಲ. ನಾವು ಕೊಡುವ ಸ್ಥಳದಲ್ಲಿ ನೀವು ಹೋಗಿ ನೆಲಸಬೇಕು. ಸ್ಥಳ ಆರಿಸಿಕೊಳ್ಳುವುದು ನಿಮ್ಮ ಅಧಿಕಾರವಲ್ಲ. ಅದು ನಮ್ಮ ಇಷ್ಟ. ಈ ವಿಷಯ ತಿಳಿಸಲು ನಾನು ನಿಮ್ಮ ಮನೆಯ ಬಾಗಿಲಿಗೆ ಬರಬೇಕಾಯ್ತು. ಮಾತಿಗೆ ಪ್ರತಿ ಹೇಳದೆ ಒಪ್ಪಿಕೊಳ್ಳುವವರಿಗೆ ಮಾತ್ರ ಸರ್ಕಾರದ ಸಹಾಯ'' ಎಂಬುದಾಗಿ ಮಂತ್ರಿಗಳು ಘರ್ಜಿಸುತ್ತಿದ್ದರು. ಗ್ರಾಮದ ಪರವಾಗಿ ಯಾರೂ ಮಾತನಾಡಿದಂತೆ ನನಗೆ ಕೆಳಲಿಲ್ಲ. ಮಂತ್ರಿಗಳು ಕಾರಿನ ಹತ್ತಿರ ಬಂದರು. ಅಲ್ಲಿಯೇ ನಿಂತಿದ್ದ ನಾನು "ಸ್ವಾಮಿ ನಾನು ಈ ಗ್ರಾಮದ ಪರಿಚಯದ ವ್ಯಕ್ತಿ. ಗ್ರಾಮಸ್ಥರದೇನು ತಪ್ಪಿಲ್ಲ, ಸ್ಥಳ ಕೊಡದಿದ್ದರೆ ಅವರು ಎಲ್ಲಿಗೆ ಹೋಗಬೇಕು. ನೀವು ಹಣಕಾಸು ಮತ್ತು ಇತರ ಸಹಾಯ ನೀಡಬೇಕು. ಒಟ್ಟನಲ್ಲಿ ವಿಳಂಬವಾಗದೆ ಕಾರ್ಯ ನಡೆಯಬೇಕು ಎಂದು ಅರಿಕೆ ಮಾಡಿಕೊಂಡೆ." ನನ್ನ ಮಾತಿಗೆ ಕುಪಿತರಾಗಿ "ನನಗೆ ಗೊತ್ತಿದೆ ಸರ್ಕಾರ ಇನ್ನೂ ಸತ್ತಿಲ್ಲ. ನಿಮ್ಮ ವಕಾಲತ್ತು ಬೇಕಿಲ್ಲ" ಎಂದು ಹೇಳುತ್ತ ಆ ಮುಕ್ಕಣ್ಣ ಮಂತ್ರಿ ಹಣೆಗಣ್ಣು ಬಿಟ್ಟರು. ನಾನು ಉತ್ತರ ಕೊಡುವ ಮೊದಲೇ ಮಂತ್ರಿಗಳ ಕಾರು ಮಾಯವಾಗಿತ್ತು.

ಗ್ರಾಮಸ್ಥರು ನನ್ನನ್ನು ಸುತ್ತುವರಿದು ಮಂತ್ರಿಗಳು ಏನು ಹೇಳಿದರೆಂಬುದಾಗಿ ಪ್ರಶ್ನೆ ಮಾಡಿದರು. ಗ್ರಾಮಸ್ಥರ ತವಕವನ್ನು ಕಂಡು ನನಗೆ ದುಃಖ ಉಮ್ಮಳಿಸಿತು. ಆದರೂ ತಡೆಹಿಡಿದು ಒಂದು ವರ್ಷ ಕಾದು ನೋಡಿ ಎಂಬುದಾಗಿ ಸಮಾಧಾನ ಹೇಳಿ ಶಿವಮೊಗ್ಗಾ ದಾರಿಹಿಡಿದೆ. ಘಂಟೆ ರಾತ್ರಿ 8½ಯಾಗಿತ್ತು.

ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳು ಪ್ರಜೆಗಳೊಡನೆ ಮಾತನಾಡುವಾಗ ಮುಂಗೋಪಿತನವನ್ನು ಪ್ರದರ್ಶಿಸುವುದು ಗೌರವವೆನಿಸಬಾರದು. ಮಧ್ಯಾಹ್ನ 2 ಗಂಟೆಗೆ ಬರಬೇಕಾಗಿದ್ದವರು ರಾತ್ರಿ 7½ ಗಂಟೆಗೆ ಬಂದಾಗಲೂ ಕಾದು ಕುಳಿತ ಜನರಿಗೆ ತಮ್ಮ ಕಾರ್ಯಕ್ರಮದ ಹೆಚ್ಚು ಕಡಿಮೆ ಬಗ್ಗೆ ಒಂದು ಸಮಾಧಾನವನ್ನೂ ತಿಳಿಸದೆ, ತನ್ನ ತಪ್ಪಿಗೂ ಕ್ಷಮೆ ಯಾಚಿಸುವುದನ್ನು ಮರೆತು, ಬಾಯಿಗೆ ಬಂದಂತೆ ಮಾತನಾಡಿದುದು ದಿಟ್ಟತನವೇ ಸರಿ. ಒಟ್ಟನಲ್ಲಿ ಕಾಂಗ್ರೆಸ್ ಸರ್ಕಾರ, ಜನರೇ ಮತತೆತ್ತು ಚುನಾಯಿಸಿದ ಸರ್ಕಾರ ಅದ್ದರಿಂದ ಆ ಮಂತ್ರಿಯ ವರ್ತನೆಯನ್ನು ಸರಿ ಅಥವಾ ತಪ್ಪು ಎಂಬುದನ್ನು ಜನರೇ ನಿರ್ಧರಿಸಲಿ!

**ಬಿ. ಎನ್. ಎ. ಹೆಗ್ಡೆ,** B.A.B.L.
ಶಿವಮೊಗ್ಗಾ

## ಲೋಕ ಸಭೆಯಲ್ಲಿ........

(೩ನೇ ಪುಟದಿಂದ)

ವಿರೋಧ ಪಕ್ಷದ ಇನ್ನೊಬ್ಬ ಸದಸ್ಯರು ಮಾತನಾಡುತ್ತಾ ಅಹಮದಾಬಾದ್‌ನಲ್ಲಿ ಆಗಿರುವ ಗಲಭೆಗಳು ಇಡೀ ಗುಜರಾತ್ ಪ್ರದೇಶದಲ್ಲಿ ಕಳವಳವುಂಟುಮಾಡಿದೆ ಎಂದು ತಿಳಿಸಿದರು.

ಕಮ್ಯೂನಿಸ್ಟ್ ನಾಯಕ ಎಸ್. ಎ. ಡಾಂಗೆಯವರು ಮಾತನಾಡುತ್ತ ಈ ಗಲಭೆಯು ಅಹಿಂಸೆಗೆ ಹೆಸರಾಗಿರುವ ಗುಜರಾತಿನ ಅಹಮದಾಬಾದಿನಲ್ಲಿ ನಡೆದಿದೆ; ಎರಡನೆಯದಾಗಿ ಹುತಾತ್ಮರಿಗೆ ಗೌರವವರ್ಪಿಸುವುದನ್ನು ಅಲ್ಲಿ ಅಡ್ಡಿಪಡಿಸಲಾಗಿದೆ. ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುವುದು ಜನ್ಮಸಿದ್ಧವಾದ ಹಕ್ಕಾಗಿದೆ. ಅದನ್ನು ಸರಕಾರ ಕಸಿದುಕೊಂಡಿದೆ.

ಮುಂಬಯಿ ರಾಜ್ಯ ದೊಡ್ಡ ರಾಜ್ಯ, ಕಾಂಗ್ರೆಸ್ ಮಂತ್ರಿ ಮಂಡಲ ಬಹಳ "ಚೆನ್ನಾಗಿ" ಆಡಳಿತೆ ನಡೆಸುತ್ತಿದೆ. ಆದರೆ ಪರಿಸ್ಥಿತಿ ತೀರ ಗಂಭೀರವಾಗಿದೆ. ಕೇಂದ್ರ ಸರಕಾರ ಇದನ್ನು ಗಮನಿಸಬೇಕಾಗಿದೆ. ಈ ಸಭೆಯಲ್ಲಿ ವಿಷಯವು ಚರ್ಚೆಯಾಗುವುದು ಸೂಕ್ತವಾದುದಾಗಿದೆ ಎಂದು ಹೇಳಿದರು.

ಡಾಂಗೆಯವರು ಅಹಮದಾಬಾದ್ ಗೋಳೀಬಾರಿನಲ್ಲಿ ಮೃತರಿಗೆ ಸಂತಾಪ ಸೂಚಿಸಲು ಸಭಾ ತ್ಯಾಗ ನಡೆಸುವುದಾಗಿ ತಿಳಿಸಿದ ನಂತರ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ನಡೆಸಿದರು.

# ಗೌರೀಬಿದನೂರು ಕಾಂಗ್ರೆಸ್ ಶಿಷ್ಯರ ಕತೆ ನಿಮಗೆ ಗೊತ್ತೆ?

## ಕೇವಲ ಮುಖ್ಯ ಮಂತ್ರಿಗಳ ಗಮನಕ್ಕೆ ಮಾತ್ರ

ತಾ. 6—8—58ನೇ ಬುಧವಾರ ಸಂಜೆ ಗೌರೀಬಿದನೂರು ತಾಲ್ಲೂಕು ವ್ಯವಸಾಯೋತ್ಪತ್ತಿ ಮಾರಾಟ ಸಹಕಾರ ಸಂಘದ ಅಸ್ತಿಭಾರೋತ್ಸವದ ಸಮಯದಲ್ಲಿ ಗೌರೀಬಿದನೂರು ಟೌನಿನಲ್ಲಿ ತಾವು ಮಾಡಿದ ಭಾಷಣದ ವರದಿಯನ್ನು ತಾ. 8—8—58ರ ಪ್ರಜಾವಣಿ ದಿನ ಪತ್ರಿಕೆಯಲ್ಲಿ ನೋಡಿದೆ.

ಸಭಾಧ್ಯಕ್ಷತೆ ವಹಿಸಿದ್ದ ಶ್ರೀ. ಎಂ. ಸಿ. ನಾಗಯ್ಯರೆಡ್ಡಿಯವರು ಭಾಷಣಮಾಡುತ್ತಾ, "ಈ ಜಿಲ್ಲೆಯಲ್ಲಿ ಶಿಸ್ತು ಸೊನ್ನೆಯಾಗಿದೆ. ಹಲವರು ಪೋಲೀಸರನ್ನೇ ಹೊಡೆದಿರುವ, ಮತ್ತು ಪೋಲೀಸ್ ಠಾಣೆಗಳ ಮೇಲೆ ಧಾಳಿ ಮಾಡಿರುವ ಸಂಗತಿಗಳು ವರದಿಯಾಗಿವೆ. ಈ ಬಗ್ಗೆ ಪೋಲೀಸರು ಬಿಗಿಯಾಗಿರಬೇಕು. ಪೋಲೀಸ್ ಶಾಖೆಯ ಸಚಿವರಾದ ನೀವು ಈ ಜಿಲ್ಲೆ ಬಗ್ಗೆ ವಿಶೇಷ ಗಮನ ನೀಡಬೇಕಾಗಿದೆ. ದುಷ್ಟರ ಶಿಕ್ಷಣ ಮತ್ತು ಶಿಷ್ಟರ ಪರಿಪಾಲನಾ ಕಾರ್ಯದಕಡೆ ಕೂಡಲೇ ಗಮನಕೊಡಿ," ಎಂದು ಹೇಳಿದರೆಂದು ವರದಿಯಾಗಿದೆ.

ಈ ಸಮಸ್ಯೆಗೆ ಉತ್ತರವಾಗಿ ತಾವು, "ಈ ಜಿಲ್ಲೆಯಲ್ಲಿ ಒಳ್ಳೆಯ ಜನರಿರಬೇಕೆಂಬ ಭಾವನೆ ಇತ್ತು. ಇಂತಹ ದುಷ್ಕಾರ್ಯಗಳ ವಿಷಯ ತಿಳಿಯದು ಶ್ರೀ ನಾಗಯರೆಡ್ಡಿಯವರು ಈ ಬಗ್ಗೆ ತಿಳಿಸಿದ್ದು ಒಳ್ಳೆಯದು," ಎಂದು ತಿಳಿಸಿದಿರೆಂದೂ ವರದಿಯಾಗಿದೆ,

ಶ್ರೀಯುತರೆ,

ಮುಖ್ಯ ಮಂತ್ರಿಗಳು ಹಾಗೂ ಒಳಾಡಳಿತ ಸಚಿವರಾದ ತಮಗೆ, ಈ ಜಿಲ್ಲೆಯಲ್ಲಿ ದುಷ್ಕಾರ್ಯವನ್ನೆಸಗುವ ದುಷ್ಟಶಕ್ತಿಗಳು ಇದ್ದಾರೆಂಬುದು, ತಮ್ಮ ಪಕ್ಷಕ್ಕೆ ಸೇರಿದ, ಕಳೆದ ಚುನಾವಣೆಯಲ್ಲಿ 14 ಸಹಸ್ರಕ್ಕೂ ಹೆಚ್ಚು ಬಹುಮತದಿಂದ ಪರಾಜಿತರಾದ, ಅದೇ ಕ್ಷೇತ್ರದ ಶ್ರೀ ನಾಗಯ್ಯ ರೆಡ್ಡಿಯವರ ಮೂಲಕ ಗೌರೀಬಿದನೂರಿನಲ್ಲಿ ತಿಳಿಯಿತು ಎಂಬುದನ್ನು ಸಾಮಾನ್ಯ ಪ್ರಜೆ ವಿಮರ್ಶಿಸಿದರೆ ಸತ್ಯಸಂಗತಿ ವೇದ್ಯವಾಗುತ್ತೆ.

ಕಳೆದ ಚುನಾವಣೆಯ ನಂತರ ನಮ್ಮ ಜಿಲ್ಲೆಯಲ್ಲಿ ಸಾಮಾನ್ಯ ಜನತೆ ದುಷ್ಟಶಕ್ತಿಗಳೆಂದು ಭಾವಿಸಿರುವ ಮತ್ತು ತಮ್ಮ ಪಕ್ಷದ ನಾಗಯ್ಯ ರೆಡ್ಡಿಯವರ ಬೆಂಬಲ ಪಡೆದಿರುವ ಕೆಲವು ವ್ಯಕ್ತಿಗಳ ಜನವಿರೋಧಿ ಚರ್ಯೆಗಳನ್ನು ಪರಿಶೀಲಿಸೋಣ. ಈ ಬಗ್ಗೆ ತಮ್ಮ ಪೋಲೀಸ್ ಖಾತೆ ಯಾವ ಶಕ್ತಿಗೆ ಬೆಂಬಲ ಕೊಟ್ಟು ಜನತೆಯ ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಎಂಬುದನ್ನೂ ತಮ್ಮ ಅವಗಾಹನೆಗೆ ತರಬಯಸುತ್ತೇನೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜೋಡಿ ಮುದ್ದಲಪಲ್ಲಿ ಗ್ರಾಮದ ರೈತರು, ತಮ್ಮ ಹಿಂಯರ ಕಾಲದಿಂದಲೂ ಆ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡಿದ್ದು ಅನೇಕ ಹುಣಸೆ, ಹೊಂಗೆ ಬೇವು ಮುಂತಾದ ಮರಗಳನ್ನು ಬೆಳೆಯಿಸಿದ್ದರು. ಆದರೆ ಜೋಡಿದಾರರಾದ ಶ್ರೀ ವೆಂಕಟಸುಬ್ಬಾರೆಡ್ಡಿ ಎಂಬವರು, ಆ ಮರಗಳನ್ನು ಅಕ್ರಮವಾಗಿ ಕಡಿದು ಸಾಗಿಸಿ, ಸಹಸ್ರಾರು ರೂಪಾಯಿಗಳನ್ನು ದೋಚುತ್ತಿದ್ದಾಗ ರೈತರು ಒಂದು ಗೂಡಿ, ಇದನ್ನು ನಿಲ್ಲಿಸಲು ತಮ್ಮ ಸರಕಾರವನ್ನು ಪ್ರಾರ್ಥಿಸಿದಕ್ಕೆ ತಮ್ಮ ಸರಕಾರ ಕೈಗೊಂಡ ಕ್ರಮ ಏನು? ಇದರ ಫಲಿತಾಂಶ ಏನೆಂದರೆ, ರೈತರ ಮೇಲೆ ದಬ್ಬಾಳಿಕೆ. ಜೋಡಿದಾರರಿಗೆ ಪೋಲೀಸರ ಸಹಾಯ, ಮತ್ತು ಜೋಡಿದಾರರು ರೈತರನ್ನು ಹೊಲದಿಂದ ದೂಡುವುದೇ ಆಗಿದೆ.

ಮೈಸೂರು ಸರಕಾರ 1954ನೇ ಇಸ್ವಿಯಲ್ಲಿ ಭೂಗೇಣಿ ಶಾಸನಕ್ಕೆ ತಿದ್ದುಪಡಿಯೊಂದನ್ನು ಮಾಡಿ, ಮೈದಾನ ಪ್ರದೇಶದಲ್ಲಿ ಭೂಮಾಲಿಕನಿಗೆ ಉತ್ಪತ್ತಿಯ ಮೂರನೇ ಒಂದು ಭಾಗ ಗೇಣಿಕೊಡಬೇಕೆಂಬುದು ತಮಗೆ ತಿಳಿದಿದೆ ಎಂದು ಭಾವಿಸುತ್ತೇನೆ. ಜಾಗ್ರತ ರೈತ ಜನಾಂಗ ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ಹೋಬಳಿಯಲ್ಲಿ ಈ ಕಾನೂನನ್ನು ಜಾರಿಗೆ ತರಲು ಯತ್ನಿಸಿದಾಗ ಈ ಹೋಬಳಿಯ ಕಾಂಗ್ರೆಸ್ಸಿಗರು, ಪೋಲೀಸಿನವರು, ಅಮಲ್ದಾರರು ಮತ್ತು ತಮ್ಮ ಪಕ್ಷದ ಶಾಸನಸಭಾ ಸದಸ್ಯ ಶ್ರೀ ಮುನಿರಾಜುರವರು ಕೈಗೊಂಡ ಚರ್ಯೆ ತಮ್ಮ ಗಮನಕ್ಕೆ ಬಂದಿದೆಯೆ? ಇವರುಗಳು ಯಾವ ಶಕ್ತಿ ಭಾಗಕ್ಕೆ ಸೇರಿದ್ದಾರೆಂಬುದು ನಮಗೆ ತಿಳಿದಿದೆಯೆ?

ಚಿಂತಾಮಣಿ ಮತ್ತಿತರ ತಾಲ್ಲೂಕಿನಲ್ಲಿ ನಡೆದಿರುವ ಘಟನೆಗಳ ವಿವರಣೆ ಕೊಡಬಹುದು. ಆದರೆ ಮುಖ್ಯ ಮಂತ್ರಿಗಳು ಕೇವಲ ನಾಗಯ್ಯ ರೆಡ್ಡಿಯವರ ಹೇಳಿಕೆಯನ್ನು ಗಮನಿಸಿ ಉತ್ತರವಿತ್ತಿರುವುದು ಸರಿಯಲ್ಲವೆಂದು ತಿಳಿಸುತ್ತೇವೆ.

ಅದ್ದರಿಂದ ತಮ್ಮಲ್ಲಿ ನಾವು ಅರಿಕೆ ಮಾಡಿಕೊಳ್ಳುವದೇನೆಂದರೆ ದುಷ್ಟಶಕ್ತಿಗಳಾವವು, ಅವುಗಳ ಹಾವಳಿ ಎಂಥದು ಎಂಬುದರ ನಿಜವಾದ ಪರಿಚಯ ನಿಮಗಾಗಬೇಕಿದ್ದರೆ ನೀವೇ ಒಂದು ಬಹಿರಂಗ ವಿಚಾರಣೆ ನಡೆಸಬಹುದು. ತಮಗೂ ಜನರಿಗೂ ಸತ್ಯ ಸಂಗತಿ ತಿಳಿದೀತು.

—ಹೆಚ್. ಎಸ್. ರಾಮರಾವ್



# ರಾಜ್ಯದ ರೈತ-ಕಾರ್ಮಿಕವರ್ಗದ ಮುನ್ನಡೆ

## ಟಿಂಬರ್ ಮತ್ತು ಮಿಲ್ ಕೆಲಸಗಾರರ ವಿಶೇಷ ಸಭೆ

**ಮಂಗಳೂರು:** ತಾ. 26-7-58 ರಂದು ಟಿಂಬರ್ ಮತ್ತು ಮಿಲ್ ವರ್ಕರ್ಸ್ ಯೂನಿಯನ್ನಿನ ವಿಶೇಷ ಮಹಾಸಭೆಯು ಶ್ರೀ ಡೇವಿಡ್ ಕರ್ಕಡರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕಾರ್ಯದರ್ಶಿಗಳು ಮಜೂರರ ಮುಂದಿರುವ ಪ್ರಶ್ನೆಗಳನ್ನೂ, ಶಿವಾನಂದ ಕಾಮತರು ಕೆಲಸಗಾರರ ಅವಶ್ಯಕತೆಯನ್ನು ಕುರಿತೂ ವಿವರಿಸಿದರು. ಕಾರ್ಮಿಕರ ಬೇಡಿಕೆಗಳನ್ನು ಸಿದ್ಧಪಡಿಸಲು ೧೧ ಜನರ ಸಮಿತಿಯನ್ನು ರಚಿಸಲಾಯಿತು.

ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆಯಲು ಸರಕಾರವನ್ನು ಒತ್ತಾಯಿಸುವ ಠರಾವು ಸ್ವೀಕರಿಸಲ್ಪಟ್ಟಿತು.

## ಕೋಟೆಕಾರು ಬೀಡಿ ಮಜೂರರ ಸಭೆ

ಕೋಟೆಕಾರ್ ಬೀಡಿ ಕಾರ್ಮಿಕರ ಸಂಘದಲ್ಲಿ ತಾ. 18—7—58ರಂದು ಸರ್ಕಲ್ ಬೀಡಿ ಮಜೂರರ ಪ್ರತಿನಿಧಿಗಳ ಸಭೆಯು ಸಂಘದ ಅಧ್ಯಕ್ಷರಾದ ಯು. ಎ. ಜಿಯ್ಯಬ್ಬನವರ ಅಧ್ಯಕ್ಷತೆಯಲ್ಲಿ ನಡೆಯಿತು ಕೆ. ಮೋನಪ್ಪ ಸೆಟ್ಟಿಯವರು ಕರ್ನಾಟಕ ಬೀಡಿ ಮಜೂರರ ಪ್ರಥಮ ಸಮ್ಮೇಳನದಲ್ಲಾದ ನಿರ್ಣಯಗಳನ್ನು ವಿವರಿಸಿ, ಬೇಡಿಕೆಗಳ ಪೂರೈಕೆಗಾಗಿ ಕಾರ್ಮಿಕರಲ್ಲಿರಬೇಕಾದ ಐಕ್ಯತೆಯನ್ನು ಒತ್ತಿ ಹೇಳಿದರು. ಈ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು: ಸರ್ಕಲಿನ ೧೪ ಗ್ರಾಮಗಳಲ್ಲಿ ಗ್ರಾಮ ಸಮಿತಿಗಳನ್ನು ರಚಿಸಬೇಕು. ಸರಕಾರವು ಮಜೂರರ ಕನಿಷ್ಠ ವೇತನವನ್ನು ನಿರ್ಣಯಿಸಬೇಕು. ಅಲ್ಲಿಯ ವರೆಗೆ ೫ ಆಣೆ ಕೂಲಿ ಹೆಚ್ಚಿಸಬೇಕು. ಮತ್ತು ಬೀಡಿ ಮಜೂರರ ಹಿತರಕ್ಷಣೆಗೆ ಕಾನೂನು ಮಾಡಬೇಕು. ಇದಕ್ಕಾಗಿ ಮದ್ರಾಸ್, ಕೇರಳ ಮತ್ತು ಮೈಸೂರು ಮಜೂರ ಮಂತ್ರಿಗಳು ಸಭೆಸೇರಿ ಒಟ್ಟು ಯೋಜನೆಯೊಂದನ್ನು ಬಳಕೆಗೆ ತರಬೇಕು.

## ಸಿರ್ಸಿ ಮುನಿಸಿಪಲ್ ಕೆಲಸಗಾರರ ಸಂಘ

ಸಿರ್ಸಿಯ ಮುನ್ಸಿಪಲ್ ಕೆಲಸಗಾರರ ಸಂಘವು ತನ್ನ ನಾಲ್ಕನೆಯ ವರುಷದಲ್ಲಿ ಕಾಲಿಕ್ಕಿದೆ. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಯಶವಂತ ಹೆರವಟ್ಟಾ ಅವರು ಮೂರನೆಯ ವಾರ್ಷಿಕ ವರದಿಯನ್ನು ಕಾರ್ಯಕಾರೀ ಮಂಡಳದ ಮುಂದಿಟ್ಟು ಸಂಘದ ಸಾಧನೆಗಳನ್ನು ವಿವರಿಸಿದರು.

129 ಜನ ಸದಸ್ಯ ಸಂಪತ್ತನ್ನು ಹೊಂದಿರುವ ಈ ಸಂಘವು ಕನಿಷ್ಠ ವೇತನ ಕಾಯಿದೆಯಂತೆ, ಆಕ್ಟ್ರಾಯ್ ಖಾತೆಯ ಕಾರಕೂನರ, ಶಿಪಾಯಿಗಳ ದುಡಿಮೆಯ ಅವಧಿ, ವಾರದ ರಜೆ ಮುಂತಾದ ಸವಲತ್ತುಗಳ ಬಗ್ಗೆ ನಡೆಯಿಸಿದ ಪ್ರಯತ್ನದ ಫಲವಾಗಿ ನಗರ ಸಭೆಯವರು ಈ ಖಾತೆಯಲ್ಲಿ ಹೆಚ್ಚು ಸಿಬ್ಬಂದಿಯನ್ನು ನೇಮಿಸಿಕೊಂಡು ಆ ಸವಲತ್ತುಗಳನ್ನು ಕೆಲಸಗಾರರಿಗೆ ನೀಡಿತು. ಅದರಂತೆ ದವಾಖಾನೆಯ ಸಿಬ್ಬಂದಿಗಳ ದುಡಿಮೆಯ ಅವಧಿ, ಹೆಚ್ಚಿನ ಕೆಲಸದ ಬಗ್ಗೆ ಹಣ, ಡ್ರೈವರುಗಳಿಗೆ ಪೆನ್ಷನ್ ನೀಡುವ ಯೋಜನೆ, ಕಡಿಮೆ ಸಂಬಳದವರಿಗೂ, ಹರಿಜನ ಮಜೂರರಿಗೂ ಮನೆಕಟ್ಟಿಕೊಳ್ಳುವ ಬಗ್ಗೆ ಸ್ಥಳದ ವ್ಯವಸ್ಥೆಯ ಬಗ್ಗೆ ಎಷ್ಟುಸಲ ಮುನ್ಸಿಪಾಲ್ಟಿಯವರನ್ನು ಕೇಳಿಕೊಂಡು ಮನವಿಗಳನ್ನರ್ಪಿಸಿದರೂ ಅವರು ಗಮನ ಕೊಡದಿರುವುದು ವಿಷಾದಕರವೆಂದು ಭಾವಿಸಲಾಗಿದೆ.

ನೌಕರರ ಬೇಡಿಕೆಗಳನ್ನೆಲ್ಲ ಪೂರೈಸಿಕೊಳ್ಳುವದಕ್ಕಾಗಿ ನೌಕರರೆಲ್ಲ ಭೇದೋಪಾಯಗಳನ್ನು ಬದಿಗೊತ್ತಿ ಸಂಘಟಿತರಾಗಿ ಸಂಘದ ಬೆಂಬಲಕ್ಕೆ ನಿಲ್ಲಬೇಕೆಂದು ಕೇಳಿಕೊಳ್ಳಲಾಯಿತು.

ಬಾಗಲಕೋಟೆ—

## ಸಿಮೆಂಟ್ ಕಂಪೆನಿ ಕೆಲಸಗಾರರ ಬೇಡಿಕೆಗಳು

ಸಂಘದ ಪರವಾಗಿ ಕೆಲವು ಬೇಡಿಕೆಗಳನ್ನು 1956ರಲ್ಲಿ ಕಂಪೆನಿಯವರಿಗೆ ಮಂಜೂರಿ ಸಲುವಾಗಿ ಕಳುಹಿಸಿಕೊಟ್ಟಿದ್ದೆವು ಕಂಪೆನಿಯವರು ಅವುಗಳನ್ನು ವಿಚಾರ ಮಾಡಲಿಕ್ಕೆ ಮುಂದೆ ಬಾರದ್ದರಿಂದ ಅವುಗಳನ್ನೆಲ್ಲ ಕನ್‌ಸೀಲಿಯೇಶನ್ ಆಫೀಸರ (ಪಂಚಾಯಿತಿ ಅಧಿಕಾರಿ) ರಿಗೆ ಕಳಿಸಿಕೊಡಲಾಗಿತ್ತು. ಕನ್‌ಸೀಲಿಯೇಶನ್ ಪ್ರಾರಂಭವಾಗುತ್ತಲೇ ಪ್ರಾಂತೀಕರಣದ ಪ್ರಶ್ನೆ ಬಂದದ್ದರಿಂದ ನಮ್ಮ ಪ್ರಕರಣ ಅಲ್ಲಿಯೇ ಉಳಿಯಿತು. ತಾ. 11—7—58ನೇ ದಿವಸ ನಮ್ಮ ಸಂಘದ ಪರವಾಗಿ ಕೆಲವು ಬೇಡಿಕೆಗಳನ್ನು ಕಂಪೆನಿಗೂ ಹುಬ್ಬಳ್ಳಿಯಲ್ಲಿರುವ ಕನ್‌ಸೀಲಿಯೇಸನ್ ಅಧಿಕಾರಿಗಳಿಗೂ ಕಳುಹಿಸಿಕೊಡಲಾಗಿದೆ. ಈ ಬೇಡಿಕೆಗಳನ್ನು ಆದಷ್ಟು ಬೇಗನೇ ಮಂಜೂರಿ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ಸ್ಕಿಲ್ಡ ಮತ್ತು ಇತರ ಕೆಲಸಗಾರರ ಬೇಡಿಕೆಗಳನ್ನು ಆಯಾ ಖಾತೆಗೆ ಸಂಬಂಧಪಟ್ಟ ಕೆಲಸಗಾರರು ನಮ್ಮ ಸಂಘಕ್ಕೆ ಬಂದು ತಿಳಿಸಬೇಕು. ಅಂಥ ಬೇಡಿಕೆಗಳ ಸಲುವಾಗಿಯೂ ಹೋರಾಡಲಾಗುವದು.

ತಾ. 30—7—58ನೇ ದಿವಸ ಹುಬ್ಬಳ್ಳಿಯಿಂದ ಅಸಿಸ್ಟೆಂಟ್ ಕನ್ಸಿಲೀಯೇಶನ್ ಆಫೀಸರರು ಇಲ್ಲಿಗೆ ಬಂದಿದ್ದು ಕಂಪೆನಿ ಮತ್ತು ಸಂಘದ ಪ್ರತಿನಿಧಿಗಳ ಕೂಡ ಬೇಡಿಕೆಗಳ ಕುರಿತು ಚರ್ಚೆ ಮಾಡಿದರು. ವಿಚಾರಣೆಯನ್ನು ಆದಷ್ಟು ತೀವ್ರವಾಗಿ ಪ್ರಾರಂಭಿಸುವದಾಗಿ ಹೇಳಿರುವರು. ಕಂಪೆನಿಯೊಳಗೆ ನೀರಿನ ವ್ಯವಸ್ಥೆ, ರೆಸ್ಟ್ ಹಾಸ್, ಡಾಕ್ಟರರ ಮೊದಲಾದವುಗಳ ವ್ಯವಸ್ಥೆ ಮಾಡಬೇಕೆಂದೂ ಈ. ಸಿ. ಪಿ. ನಂಬರುಗಳನ್ನು ಕೂಡಲೇ ರದ್ದು ಪಡಿಸಿ ಎಲ್ಲ ಕೆಲಸಗಾರರರಿಗೂ ಬಿಲ್ (ಟೋಕನ) ಕೊಡಬೇಕೆಂದೂ ಕಂಪೆನಿಯವರಿಗೆ ಆದೇಶ ಕೊಟ್ಟಿರುವರು.

ಕಾರ್ಮಿಕ ಬಂಧುಗಳು ಬೇಡಿಕೆಗಳೆಲ್ಲವನ್ನು ಪಡೆಯಬೇಕಾದರೆ ನಮ್ಮಲ್ಲಿ ಸಂಘಟನೆ ಮತ್ತು ಒಕ್ಕಟ್ಟು ಬೆಳೆಯಬೇಕು. ಎಲ್ಲ ಕೆಲಸಗಾರರು ಈ ಸಂಘದ ಸದಸ್ಯರಾಗಿ ಸಂಘ ಶಕ್ತಿಯನ್ನು ಪ್ರಬಲಗೊಳಿಸಬೇಕು.

## ಗೋಕಾಕ್‌ನಲ್ಲಿ ಬಿಳೀ ಮಾಲೀಕರ ತಂತ್ರ

ಗೋಕಾಕ ಗಿರಣಿ ಕಾರ್ಮಿಕರ ಬೋನಸ್ ಹಣ ಕೊಡಲು ಮೆನೇಜ್‌ಮೆಂಟ್ ನಿರಾಕರಿಸುತ್ತಿದೆ ಕಾರಣವೇನೆಂದರೆ ಪ್ರಾತಿನಿಧಿಕ ಸಂಘ ಯಾವುದು ಎಂಬ ಜಗಳ ಕೋರ್ಟಿನಲ್ಲಿ ಬಿದ್ದಿರುವದಾಗಿದೆ. ಈ ಸಂದರ್ಭವನ್ನು ಸಾಧಿಸಿ ಬಿಳಿಯ ಮಾಲಿಕಶಾಹಿಗಳು ಹೊಸ ಮನೆಗಳನ್ನು ಕಟ್ಟಿಸಿ, ಹೊಸ ಯಂತ್ರ ಸಾಮಗ್ರಿಗಳನ್ನು ತರಿಸಿ ಹಣ ಎತ್ತಿ ಹಾಕುವ ಎತ್ತುಗಡೆ ನಡೆಸಿದಂತೆ ಕಂಡು ಬಂದುದರಿಂದ ಗೋಕಾಕ ಗಿರಣೀ ಕಾರ್ಮಿಕರು ಮತ್ತೊಮ್ಮೆ ಭಾರೀ ಆಂದೋಲನಕ್ಕೆ ಸಿದ್ಧರಾಗುತ್ತಿದ್ದಾರೆ.

## ಮಾಂಬಳ್ಳಿ ಸಿಲ್ಕ್ ಫ್ಯಾಕ್ಟರಿ ಮಾಲಿಕರಿಗೆ ಧಿಃಕಾರ

ಮಾಂಬಳ್ಳಿ ಸಿಲ್ಕ್ ಥ್ರೋಯಿಂಗ್ ಅಂಡ್ ವೀವಿಂಗ್ ಫ್ಯಾಕ್ಟರಿಯ ಕಾರ್ಮಿಕರಿಗೆ ೨೫ ರೂ. ಸಂಬಳ ೨೫ ರೂ. ತುಟ್ಟಿ ಭತ್ಯೆ ಮತ್ತು ವೀವರ್ಸ್‌ಗಳಿಗೆ ೩೦ ರೂ. ತುಟ್ಟಿಭತ್ಯೆ ಬೇಕೆಂದೂ ಹಾಗೂ ಇನ್ನಿತರ ಬೇಡಿಕೆಗಳನ್ನೂ ಮೈಸೂರು ಜಿಲ್ಲಾ ರೇಷ್ಮೆ ಕೆಲಸಗಾರರ ಸಂಘವು ಮಾಲಿಕರ ಮುಂದೆ ಮಂಡಿಸಿತ್ತು. ಆದರೆ ಮಾಲಿಕರು

(ಅನೇ ಪುಟ ನೋಡಿ)

## ಸಂಪಾದಕರಿಗೆ ಪತ್ರಗಳು

### ಹಾಸನದಲ್ಲಿ ಕಾರ್ಮಿಕರಿಗೆ ಕಾನೂನು ಇಲ್ಲ

ಹಾಸನವು ಜಿಲ್ಲಾ ಮುಖ್ಯ ಸ್ಥಳವಾಗಿದೆ. ಅನೇಕ ಕಾರ್ಖಾನೆಗಳು, ಗಿರಣಿಗಳು ಇಲ್ಲಿದ್ದು ಅನೇಕ ಜನರು ಇವುಗಳಲ್ಲಿ ದುಡಿಯುತ್ತಿರುವರು. ಇವರಿಗೆ ನಿಗದಿಯಾದ ಟೈಮ್ ಇಲ್ಲದೆ ತುಂಬಾ ತೊಂದರೆಯಾಗಿದೆ. ಕಾರಣ ಘನಸರಕಾರದವರು ಈ ಕಡೆಗೆ ಗಮನಕೊಟ್ಟು ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟನ್ನು ಎಲ್ಲರೂ ಕಡ್ಡಾಯವಾಗಿ ಜಾರಿಗೆ ತರುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಕಾರ್ಮಿಕ ಶಾಖಾ ಸಚಿವರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಇಲ್ಲಿಗೆ ದಯಮಾಡಿಸಿದಾಗ ಮನವಿಯನ್ನರ್ಪಿಸಿದರೂ ಏನೂ ಪ್ರಯೋಜನವಾಗಿಲ್ಲ. ಕಾರ್ಮಿಕರ ತೊಂದರೆಗಳ ಪರಿಹಾರವನ್ನು ಸರಕಾರ ಶಕ್ತಿಯಿದ್ದೂ ಮಾಡದಿದ್ದರೆ ಸರಕಾರ ಏತಕ್ಕೆ? ಎಂದು ಕಾರ್ಮಿಕರು ಕೇಳುತ್ತಿದ್ದಾರೆ.

ಹೆಚ್. ಎನ್. ಬಸವರಾಜ
ಹಾಸನ

### ಲಂಚನಿರೋಧ ಶಾಖೆಯವರು ಗಮನಿಸಬೇಕು

ಅರಸಿಕೆರೆ ತಾಲ್ಲೂಕು ಜಾವಗಲ್ ಪೋಲೀಸು ದಫೇದಾರರು ದೊಡ್ಡಗಟ್ಟದ ರೈತ ಸಂಘದ ಸದಸ್ಯರಾದ ಡಿ. ಜಿ. ಗಿರಿಗೌಡ ವಗೈರೆಯವರನ್ನು ಹಿಡಿದು ಅಕ್ರಮ ಬೈದು ಮಾಡೀ ವಿಪರೀತ ಹೊಡೆದು ಮಾಮೂಲು ತೆಗೆದುಕೊಂಡು ನಂತರ ಈ ವಿಚಾರ ಯಾರಿಗೂ ಹೇಳಕೂಡದೆಂದು ಹೆದರಿಸಿಬಿಟ್ಟರಂತೆ. ಈ ವಿಚಾರದಲ್ಲಿ ಹಾಸನ ಜಿಲ್ಲಾ ರೈತ ಸಂಘಕ್ಕೆ ಡಿ. ಜಿ. ಗಿರಿಗೌಡರಿಂದ ಫಿರ್ಯಾದು ಬಂದಿದೆ. ಬಾಣಾವರ ಸಬ್‌ಇನ್ಸ್‌ಪೆಕ್ಟರರು ಬೆಂಡೆಕೆರೆ ಕೊರಚರ ಕುದುಗ ವಗೈರೆಯವರಿಂದ ಲಂಚ ತೆಗೆದುಕೊಂಡು ಅನ್ಯಾಯ ಮಾಡಿದ್ದಾರೆಂದೂ ದೂರು ಬಂದಿದೆ. ನಮ್ಮ ಮಂತ್ರಿಗಳು ಈ ಕಡೆಗೆ ಗಮನಕೊಟ್ಟು ಜನರಿಗಾಗುವ ತೊಂದರೆಗಳನ್ನು ತಪ್ಪಿಸಬೇಕು.

ಕೆ. ಎಲ್. ಹುಚ್ಚಪ್ಪ
ರೈತ ಸಂಘ, ಹಾಸನ

### ಬಾಗಲಕೋಟೆ ಹಾಸ್ಟೆಲ್

ನಿಮ್ಮ 10—8—58ನೇ ದಿನಾಂಕದ ವಾರಪತ್ರಿಕೆಯಲ್ಲಿ "ಬಾಗಲಕೋಟೆ ಹಾಸ್ಟೇಲಿನಲ್ಲಿ ಹಿಂದುಳಿದವರಿಗೆ ಹಿಂಸೆ" ಅಂಬುವ ಶಿರೋನಾಮೆಯಲ್ಲಿ ಬರೆದ ಸಂಗತಿ ಸಂಪೂರ್ಣ ಅಸತ್ಯವಿರುತ್ತದೆ. ಈ ಹಾಸ್ಟೇಲಿಗೆ ಕೇಂದ್ರ ಸರಕಾರದಿಂದ ಎಳ್ಳಷ್ಟೂ ಹಣ ಸಿಗುವದಿಲ್ಲ. ಆದರೆ ಮೈಸೂರು ಸರಕಾರದಿಂದ ವಾರ್ಷಿಕ ಗ್ರ್ಯಾಂಟು ಸಿಗುತ್ತದೆ. ಇದಲ್ಲದೆ ಕೆಲವು ಸಂಘ ಸಂಸ್ಥೆಗಳೂ ಮತ್ತು ವ್ಯಕ್ತಿಗಳು ಹಾಸ್ಟೇಲಿಗೆ ಸಹಾಯ ನೀಡುತ್ತಾರೆ.

ಈ ಹಾಸ್ಟೇಲಿನಲ್ಲಿ ಒಳ್ಳೇ ರುಚಿಕರ ಮತ್ತು ಸಾಕಷ್ಟು ಆಹಾರವನ್ನು ಕೊಟ್ಟದ್ದು ಮೇಲಾಧಿಕಾರಿಗಳ ಶಿಫಾರಸು ಉಂಟು. ಹಾಸ್ಟೇಲಿನ ವ್ಯವಸ್ಥಾಪಕರು ವಿದ್ಯಾರ್ಥಿಗಳನ್ನು ಬೆದರಿಸುವುದು ಮತ್ತು ಅವರ ಪಾಲಕರಿಗೆ ಎಚ್ಚರಿಕೆ ಕೊಡುವರು. ಅಂತ ಬರೆದದ್ದು ನಿಜವಲ್ಲ.

ಬಿ. ಟಿ. ಮುರುನಾಳ
ವ್ಯವಸ್ಥಾಪಕ: ಹಿಂದುಳಿದ ಹುಡುಗರ ಹಾಸ್ಟೆಲ್

# ಕಮ್ಯೂನಿಸ್ಟ್ ಪಾರ್ಟಿ ಸಭೆಗಳು

**ದೊಡ್ಡಬಳ್ಳಾಪುರ—**

ದೊಡ್ಡಬಳ್ಳಾಪುರದ ಆಸ್ಪತ್ರೆ ಮೈದಾನದಲ್ಲಿ ತಾ. 6—8—1958ರಂದು ಕಾ॥ ಹೆಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ ಭಾರೀ ಬಹಿರಂಗ ಸಭೆಯನ್ನುದ್ದೇಶಿಸಿ ಭಾರತ ಕಮ್ಯೂನಿಸ್ಟ್ ಪಾರ್ಟಿಯ ರಾಷ್ಟ್ರೀಯ ಮಂಡಲಿ ಸದಸ್ಯರಾದ ಕಾ॥ ಬಿ. ವಿ. ಕಕ್ಕಿಲ್ಲಾಯರು ಮಾತನಾಡಿ ಮಧ್ಯಅರಬ್ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಸೈನಿಕ ಕಾರ್ಯಾಚರಣೆಯು ವಿಶ್ವಶಾಂತಿಗೆ ಮತ್ತು ಮಧ್ಯಪ್ರಾಚ್ಯದ ಆಂತರಿಕ ಹಿತಗಳಿಗೆ ಧಕ್ಕೆಯುಂಟಾಗಿದೆಯೆಂಬುದನ್ನು ತಿಳಿಸಿದರು. ಕಮ್ಯೂನಿಸ್ಟ್ ಪಾರ್ಟಿಯ ಕೆಂಪು ಬಾವುಟದ ವಿವರಣೆಯನ್ನು ನೀಡಿ ತಾಲ್ಲೂಕಿನ ಜನತೆ ಕಮ್ಯೂನಿಸ್ಟ್ ಪಾರ್ಟಿಯನ್ನು ಬಲಪಡಿಸಬೇಕೆಂದು ಕರೆಕೊಟ್ಟು ಆ ನಂಬಿಕೆ ತಮಗಿದೆಯೆಂದೂ ತಿಳಿಸಿದರು.

ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಕಾ॥ ಸೂರ್ಯನಾರಾಯಣ ರಾವ್ ಪಾರ್ಟಿಯ ಸದಸ್ಯರಾಗಲು ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು ಕಾರ್ಯಕರ್ತರನ್ನು ಪಾರ್ಟಿ ಸ್ವಾಗತಿಸುತ್ತದೆಂದು ಹೇಳಿ ಅಮೃತಸರದ ಸಮಾವೇಶದ ರಾಜಕೀಯ ಗೊತ್ತುವಳಿಯನ್ನು, ಶಾಂತಿಯುತ ನೀತಿಯ ಘಟನಾವಳಿಯನ್ನೂ ವಿವರಿಸಿ ಈ ಆಧಾರಗಳ ಮೇಲೆ ಭಾರತ ಕಮ್ಯೂನಿಸ್ಟ್ ಪಾರ್ಟಿಯು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡಿದೆಯೆಂದು ತಿಳಿಸಿದರು.

ಕಾ॥ ವೈ. ಆರ್. ಸತ್ಯನಾರಾಯಣ ಇವರು ತೆಲುಗಿನಲ್ಲಿ ಮಾತನಾಡಿ ಈ ದಿನದ ಭಾರೀ ಬಹಿರಂಗ ಸಭೆಯೇ ತಾಲ್ಲೂಕಿನ ಜನತೆ ಕಮ್ಯೂನಿಸ್ಟ್ ಪಾರ್ಟಿಯನ್ನು ಸ್ವಾಗತಿಸುತ್ತದೆಯೆಂಬುದನ್ನು ತೋರಿಸುತ್ತದೆಂದೂ ಚುನಾವಣೆಗಳಲ್ಲಿ ಹೇಗೆ ತಮ್ಮ ಪಕ್ಷವು ಮುಂದುವರಿಯುತ್ತದೆಂದೂ ವಿವರಿಸಿದರು.

ತದನಂತರ ಕಾ॥ ಮರಿದಾಸ್‌ರವರು ಕಾರ್ಮಿಕರು ಮತ್ತು ರೈತರು ಒಂದಾಗಬೇಕೆಂದೂ ಅವರಿಗಿರುವ ಕಾನೂನುಗಳ ಸೂಕ್ಷ್ಮ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡಿ ತಮ್ಮ ಮೂವತ್ತು ವರ್ಷಗಳ ಕಾಂಗ್ರೆಸ್ ರಾಜಕೀಯ ಜೀವನವನ್ನು ವಿವರಿಸಿ "ಅಂದು ನಿಷ್ಠಾವಂತನಿಗೆ ದೇಶದ ಬಡತನ ನಿರ್ಮೂಲನದ ಬಗ್ಗೆ ಹೆಚ್ಚು ಅರಿವಿತ್ತೆಂದೂ ಇಂದು ಆ ಸ್ಥಾನವನ್ನು ಬಂಡವಾಳಗಾರರು ಆಕ್ರಮಿಸಿರುವುದರಿಂದ ಆ ವರ್ಗದ ಹಿತವೊಂದೇ ಅವರ ಧ್ಯೇಯವೆಂದೂ" ತಿಳಿಸಿ, ದೊಡ್ಡಬಳ್ಳಾಪುರ ಹಿಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಮೊದಲ ಬಾರಿ ಹಳೇ ಮೈಸೂರಿಗೆ ನಾಂದಿ ಹಾಕಿಕೊಟ್ಟಿತೆಂದೂ ಅಂದು ತಮ್ಮ ಮನೆಯಲ್ಲೇ ಕಾಂಗ್ರೆಸ್ ಆಫೀಸು ಸ್ಥಾಪನೆಯಾದುದನ್ನು ಜ್ಞಾಪಿಸಿ ಇಂದೂ ರೈತ—ಕಾರ್ಮಿಕ ಚಳುವಳಿಗೆ—ಕಮ್ಯೂನಿಸ್ಟ್ ಪಾರ್ಟಿಗೆ ತಮ್ಮ ಮನೆಯನ್ನೇ ಕೊಡುವುದಾಗಿಯೂ ಘೋಷಿಸಿದರು!

ಕಾ॥ ಡಿ. ವಿ. ಗಂಗಾಧರ್‌ರವರು ಸ್ವಾಗತ ಭಾಷಣವನ್ನೂ, ಕಾ॥ ಸಿ. ರಾಮಭದ್ರಯ್ಯನವರು ವಂದನಾರ್ಪಣೆಯನ್ನು ಮಾಡಿದರು.

## ಪಾರ್ಟಿ ಕಾರ್ಯಕರ್ತರ ಸಭೆ

ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ಸಭೆಯು ತಾ. 7—8—'58ರಂದು ಕಾ॥ ಎಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಪಕ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ರಾಮಭದ್ರಯ್ಯನವರು ಮಾತನಾಡಿ, ಭಾರತದಲ್ಲಿ ಪಾರ್ಟಿಯ ಬೆಳವಣಿಗೆಯನ್ನು ವಿವರಿಸಿದರು. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾ॥ ಸೂರ್ಯನಾರಾಯಣರಾವ್ ತಾಲ್ಲೂಕು ಶಾಖೆಯನ್ನು ಉದ್ಘಾಟಿಸಿ — ಕಾರ್ಯಕರ್ತರನ್ನು ಕೂಡಿಸುವ ರೀತಿಯನ್ನು ವಿವರಿಸಿ ಜಿಲ್ಲಾ ಸಮ್ಮೇಳನವನ್ನು ಇಲ್ಲಿಯೇ ನಡೆಸಲು ತಮ್ಮ ಇಚ್ಛೆಯಿದೆ ಎಂದು ಹೇಳಿದರು. ತಾಲ್ಲೂಕು ಸಮಿತಿಗೆ ಕಾಂ॥ ಹೆಚ್. ಮುಗುವಾಳಪ್ಪ, ಕಾರ್ಯದರ್ಶಿಯಾಗಿಯೂ; ಕಾಂ॥ ರಾಮಭದ್ರಯ್ಯ, ತಿರುವಿಳ್ಳಯ್ಯ, ಡಿ. ಗಂಗಾಧರ್, ರಾಮಕೃಷ್ಣಯ್ಯ ಇವರನ್ನು ಸದಸ್ಯರನ್ನಾಗಿಯೂ ಚುನಾಯಿಸಲಾಯಿತು.

**ಕೊಡಿಯಾಲ್‌ಬೈಲ್—**

ತಾ. 30—7—58ರಂದು ಭಾರತ ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ಕೊಡಿಯಾಲ್‌ಬೈಲು ಶಾಖೆಯು ತನ್ನ ಆಫೀಸಿನಲ್ಲಿ ಸಭೆ ಸೇರಿ ಅಗ್ಗ ದರದ ಅಕ್ಕಿ ಅಂಗಡಿಗಳನ್ನು ತೆರೆಯಬೇಕೆಂದು ಸರ್ಕಾರಕ್ಕೆ ಒತ್ತಾಯ ನೀಡಿತಲ್ಲದೆ, ಮಂಗಳೂರು ಪುರಸಭೆಯ ಚುನಾವಣೆಗಳನ್ನು ಮುಂದೆ ಹಾಕದೆ ಕ್ಲಪ್ತ ಕಾಲದಲ್ಲಿ ನಡೆಸಬೇಕೆಂದು ಬಲವಂತಪಡಿಸಿತು.

**ಜಪ್ಪು—**

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಜಪ್ಪು ಶಾಖೆಯ ಸಭೆಯೊಂದು ಕಾಂ। ಬಿ. ಸಿ. ಶೇಖರ್ ಅವರ ಅಧ್ಯಕ್ಷತೆಯಲ್ಲಿ ತಾ. 27—7—58ರಂದು ನಡೆಯಿತು.

ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ತಡೆಗಟ್ಟಿ ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆಯಬೇಕೆಂದು ಮೈಸೂರು ಸರಕಾರವನ್ನು ಒತ್ತಾಯಿಸಲಾಯಿತು. ಈ ವಾರ್ಡಿಗೆ ನಳ್ಳಿನೀರಿನ ವ್ಯವಸ್ಥೆಯಾಗಬೇಕು. ಮಂಗಳೂರು ಮುನಿಸಿಪಾಲಿಟಿಯ ಚುನಾವಣೆಗಳನ್ನು ಮುಂದೂಡಿರುವುದನ್ನು ಖಂಡಿಸಲಾಗುವುದಲ್ಲದೆ ನಿಗದಿಯಾದ ಕಾಲದಲ್ಲಿ ಚುನಾವಣೆಗಳು ನಡೆಯಬೇಕು ಎಂಬ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

**ತೂದೂರು—**

ತೂದೂರು ಕಮ್ಯೂನಿಸ್ಟ್ ಪಾರ್ಟಿ ಶಾಖೆಯ ಸಭೆ 23—7—58ರಂದು ನಡೆದು ಪಾರ್ಟಿ ಚಟುವಟಿಕೆಗಳನ್ನು ಚರ್ಚಿಸಿ ಮಧ್ಯಪ್ರಾಚ್ಯದಲ್ಲಿಯ ದುರಾಕ್ರಮಣವನ್ನು ಖಂಡಿಸಲಾಯಿತು.

# ರಾಜ್ಯದ ರೈತ ಕಾರ್ಮಿಕ ವರ್ಗದ ಮುನ್ನಡೆ

(೭ನೇ ಪುಟದಿಂದ)

ಇವುಗಳನ್ನೆಲ್ಲ ಮೀನ ಮೇಷ ಮಾಡಿ ಮುಂದೆ ತಳ್ಳಿ ಕಾರ್ಮಿಕರ ಒಗ್ಗಟ್ಟನ್ನೂ ಛಿದ್ರಗೊಳಿಸತೊಡಗಿದರು. ಆಸಿಸ್ಟೆಂಟ್ ಲೇಬರ್ ಕಮಿಷನರ್‌ರವರು ಪಂಚಾಯ್ತಿಗೆ ೨-೩ ಸಲ ಕರೆದರೂ ಮಾಲಿಕರು ಬಾರದುದರಿಂದ ಇದನ್ನು ಔದ್ಯೋಗಿಕ ವಿವಾದದ ಕೋರ್ಟಿಗೆ ಹಾಕಲು ಹೇಳಿ ಸರ್ಕಾರಕ್ಕೆ ಒತ್ತಾಯಪಡಿಸಿದರು. ಈ ವಿವಾದ ಈಗ ಕೋರ್ಟಿಗೆ ಬರುವ ಸಂಭವವಿದೆ. ಮಾಲಿಕರು ಈಗ ಕೆಲಸಗಾರರರಿಂದ ಕೆಲ ಪತ್ರಗಳಲ್ಲಿ ಮೋಸದಿಂದ ರುಜು ತೆಗೆದುಕೊಂಡು ಇಲ್ಲದ ಕಿತಾಪತಿ ಆರಂಭಿಸಿದ್ದಾರೆ.

ಈ ಧೋರಣೆಯನ್ನು ಖಂಡಿಸಲು ಕಾರ್ಮಿಕರು ಎಚ್ಚರವಾಗಿರಬೇಕೆಂಬ ಕರೆ ಕೊಡಲು 9—8—58 ರಂದು ಜಿಲ್ಲಾ ರೇಷ್ಮೆ ಕೆಲಸಗಾರರ ಸಭೆ ಸೇರಿತ್ತು.

## ಕುಣಿಗಲ್ ಪಿ. ಡಬ್ಲ್ಯು. ಡಿ. ಕೆಲಸಗಾರರ ಸಂಘ

ಕುಣಿಗಲ್ ತಾಲೂಕಿನಲ್ಲಿರುವ ಸುಮಾರು 55 ಪಿ. ಡಬ್ಲ್ಯು. ಡಿ. ಗ್ಯಾಂಗ್ ಕೆಲಸಗಾರರ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿಯೂ, ಹಿತಚಿಂತನೆಗಾಗಿಯೂ ಸಂಘವೊಂದನ್ನು ರಚಿಸಲು ಕುಣಿಗಲ್ಲಿನ ಕಮ್ಯೂನಿಸ್ಟ್ ಪಾರ್ಟಿ ಕಛೇರಿಯಲ್ಲಿ 10-8-58 ರಂದು ಗ್ಯಾಂಗ್ ಕೆಲಸಗಾರರ ಸಭೆ ಆರ್. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಸಂಘಕ್ಕೆ ಅಧಿಕಾರೀ ವರ್ಗವನ್ನೂ ಕಾರ್ಯಕಾರೀ ಸಮಿತಿಯನ್ನೂ ಚುನಾಯಿಸಿ ಬೇಗನೆ ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂದು ತೀರ್ಮಾನಿಸಲಾಯಿತು.

## ಹೋಟೆಲ್ ಕೆಲಸಗಾರರ ಸಭೆ

ತಾ॥ 7—8—58ರಂದು ಕುಣಿಗಲ್ ಹೋಟೆಲ್ ಕೆಲಸಗಾರ ಸಂಘದ ಸರ್ವಸದಸ್ಯರ ಸಭೆ ಶ್ರೀ ವಿ. ಆರ್. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ತಿಂಡಿ ಮತ್ತು ಅಡಿಗೆಯವರಿಗೆ 70 ರೂ., ಸಪ್ಲೈಯರ್ಸ್, ಕಾಫಿ ಮಾಡುವವರು, ರುಬ್ಬುವವರು ಇವರಿಗೆ 30 ರೂ. ನೀರುಗಾಡಿ ಹೊಡೆಯುವವರಿಗೆ ಸ್ಟೋರ್ ಕೀಪರುಗಳಿಗೆ 20 ರೂ. ಕ್ಲೀನರುಗಳಿಗೆ 15 ರೂ. ಸಂಬಳ ಕೊಡಬೇಕು. ಕೆಲಸದ ಕಾಲಾವಧಿಯನ್ನು ಕಡ್ಡಾಯವಾಗಿ 8 ಗಂಟೆಗಳಿಗಿಳಿಸಬೇಕು ಎಂಬ ತೀರ್ಮಾನಗಳನ್ನು ಅಂಗೀಕರಿಸಿ ಇವುಗಳನ್ನು ಮಾಲಿಕರು ಜಾರಿಗೆ ತರಲು ಮತ್ತು ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರು ಈ ವಿಷಯದಲ್ಲಿ ಹೆಚ್ಚು ನಿಗಾ ಕೊಡಬೇಕು ಎಂದು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯಿತು.

## ಮುನಿಸಿಪಲ್ ಕೆಲಸಗಾರರ ಸಭೆ

ತಾ॥ 7—8—58ರಂದು ಕುಣಿಗಲ್ ಟೌನ್ ಮುನಿಸಿಪಲ್ ಕೆಲಸಗಾರರ ಸಭೆ ಶ್ರೀ ಅಂಕಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು.

ತಾ॥ 17—5—58 ರಂದು ಮುನಿಯನೆಂಬ ಕೆಲಸಗಾರನು ವಿದ್ಯುತ್ ಶಾಖದಿಂದ ಮೃತನಾದುದಕ್ಕೆ ಸಂತಾಪ ಸೂಚಿಸಿ 10 ವರುಷದಿಂದ ಕೆಲಸ ಮಾಡುತ್ತಿದ್ದ ಈತನ ಸ್ಥಳಕ್ಕೆ ಸಂಬಂಧಿಕ ರಾಮಯ್ಯನನ್ನು ನೇಮಿಸಿಕೊಳ್ಳಬೇಕು ಮತ್ತು ಮೃತನ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಅಂಗೀಕರಿಸಿದ ಗೊತ್ತುವಳಿಯನ್ನು ಮತ್ತೊಮ್ಮೆ ಮುನಿಸಿಪಾಲ್ಟಿಗೆ ತಿಳಿಸಿ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಮುನಿಸಿಪಾಲಿಟಿಯ ವಿಲಂಬ ನೀತಿಯನ್ನು ಖಂಡಿಸಲಾಯಿತು.

---

**ಬಾಗಲಕೋಟೆ—**

# ಆಸ್ಪತ್ರೆಯಲ್ಲಿ ಸುಲಿಗೆ ಧಾರಾಳವಾಗಿದೆ

## ವ್ಯಕ್ತಿಗೆ ಬೆಲೆಯಿಲ್ಲ, ಹಣಕ್ಕೆ ಬೆಲೆ!

ಕೆಲವು ದಿನಗಳ ಹಿಂದೆ, ಸರ್ಪ ಕಚ್ಚಿದೆ ಅಂತಾ ಹಳ್ಳೂರಿನಿಂದ ಓರ್ವ ಮಹಿಳೆಯು ಬಾಗಲಕೋಟೆಯ ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಬಂದಾಗ್ಗೆ, ನಗರ ಸಭೆಯಿಂದ ಪೂರೈಸಲ್ಪಟ್ಟ ಔಷಧ, ವ ಇಂಜಕ್ಷನ್‌ಗಳಿಂದ ೨ ದಿನ ಉಪಚಾರ ಮಾಡಿ, ಡಾ। ಪ್ರಭು ಮಹಾಶಯರು ರೂ. 150 ವಸೂಲಿ ಮಾಡಿಕೊಂಡಿದ್ದಾರಂತೆ. ಇಲ್ಲಿಯ ಪೋಲೀಸರು ಒಬ್ಬ ಸೆರೆ ಕುಡಿದ ಆರೋಪಿಯನ್ನು ತಪಾಸಣೆಗಾಗಿ ಆಸ್ಪತ್ರೆಗೆ ಒಯ್ದಾಗ್ಗೆ ಆರೋಪಿಯು ಸೆರೆ ಕುಡಿದಿಲ್ಲವೆಂದು ಈ ಡಾಕ್ಟರರ ಸರ್ಟಿಫಿಕೇಟು! ಆದರೆ ಇದೇ ಆರೋಪಿಯ ರಕ್ತ ವ ಮೂತ್ರಿಯನ್ನು ಬೆಂಗಳೂರಿಗೆ ತಪಾಸಣೆಯ ಸಲುವಾಗಿ ಕಳಿಸಲಾಗಿ ಅಲ್ಲಿಂದ ಶೇ. 90ರಷ್ಟು ಸೆರೆ ಕುಡಿದಿರುತ್ತಾನೆ ಅಂತ ರಿಪೋರ್ಟ್ ಬಂದಿದೆಯಂತೆ.

ಸರಕಾರಿ ನೌಕರರು ಬಡ ಮಾಸ್ತರರು, ಸಿಪಾಯಿಗಳು, ಇತರರು ಹೆಲ್ತ್ ಸರ್ಟಿಫಿಕೇಟು ಕೇಳಲು ಹೋದರೆ ಕನಿಷ್ಠ 10 ರೂ. ದಕ್ಷಿಣೆಯಿಲ್ಲದೇ ಸರ್ಟಿಫಿಕೇಟು ಸಿಗುವುದಿಲ್ಲ. ಅನಾರೋಗ್ಯದಿಂದ ಬಳಲುವ ನೌಕರರು ಹೋದಾಗ ಅವರಿಗೆ ಗುಣವಾಗಲು ಎಷ್ಟು ದಿನಗಳು ಬೇಕೋ ನಿರ್ಧರಿಸಿ ಅಷ್ಟು ರೂಪಾಯಿ ಕೊಡುತ್ತಿದ್ದಾರೆ. ಸರ್ಟಿಫಿಕೇಟು ಇಲ್ಲವಾದರೆ ಹೊರಗಿನ ಪಾಸು, ಜಖಂ ಆಗಿ ಬರುವ ರೋಗಿಗಳಿಗೆ ಪ್ಲಾಸ್ಟರ್ ಹಾಕಲು ಬ್ಯಾಂಡೇಜ್ ಕಟ್ಟಲು ರೂ. 20ರಿಂದ 60 ರೂ. ವರೆಗೆ ಚಾರ್ಜ್ ಮಾಡುತ್ತಾರೆ. ತೀರ ಬಡರೋಗಿಗಳು ಉಪಚಾರಕ್ಕೆಂದು ಹೋದರೆ ಅವರಿಗೆ ಅಪಮಾನವಾಗುವಂತೆ ಉದ್ಧಟತನದಿಂದ ವರ್ತಿಸಿ ತಿರುಗಿ ಕಳಿಸುತ್ತಾರೆ.

# ವಾರದ ವಾರ್ತಾ ಸಮೀಕ್ಷೆ

(೨ನೇ ಪುಟದಿಂದ)

ಜಂಟಿ ಸಮಿತಿ ಒಪ್ಪಿತು, ಆದರೆ ಕಂಪೆನಿ ಒಪ್ಪಲಿಲ್ಲ.

ಕಂಪೆನಿಯ ಆದಾಯವು 1950ರಲ್ಲಿ ರೂ. 2,13,44,000 ಇದ್ದುದು 1957 ರಲ್ಲಿ 2,60,000 ಆಗಿದೆ. ಪ್ರಯಾಣಿಕರ ಸಂಖ್ಯೆಯು 4·60 ಲಕ್ಷಕ್ಕೇರಿದೆ. ಸಾರ್ವಜನಿಕರ ಉಪಯೋಗಕ್ಕಾಗಿರುವ ಈ ಕಂಪೆನಿಯು ಕಳೆದ ಕೆಲವು ವರ್ಷಗಳಲ್ಲಿ ಶೇಕಡ 8 ರಿಂದ 9½ಯಷ್ಟು ಡಿವಿಡೆಂಡ್ ಕೊಡುತ್ತಿದೆ.

## ದೆಹಲಿ - ಮಾಸ್ಕೋ ವಿಮಾನ ಸಂಪರ್ಕ

ದೆಹಲಿ ಮಾಸ್ಕೋ ನೇರ ಸಂಪರ್ಕ ದೊರಕಿಸಿಕೊಡಲು ವಿಮಾನ ಸಂಚಾರ ಆಗಸ್ಟ್ 15 ರಿಂದ ಆರಂಭವಾಗಿದೆ. ಯೂರೋಪಿನ ಮಾರ್ಗದಲ್ಲಿ ಬಳಸಿಕೊಂಡು ಈವರೆಗೆ ಮಾಸ್ಕೋ ತಲುಪಬೇಕಿದ್ದು ಈಗ ನೇರವಾಗಿ ಹೋಗಲು ಅನುಕೂಲವಾಗಿದೆ.

ಈ ವಿಮಾನ ದೆಹಲಿ—ತಾಷ್ಕೆಂಟ್—ಮಾಸ್ಕೋ ಮಾರ್ಗದಲ್ಲಿ ಹೋಗುತ್ತದೆ. ಪ್ರಯಾಣ ಕಾಲ ಕೇವಲ ೧೨ ಘಂಟೆ ಮಾತ್ರ.

ಭಾರತದ ಏರ್ ಇಂಡಿಯ ಇಂಟರ್‌ನ್ಯಾಷನಲ್ ಮತ್ತು ಸೋವಿಯತ್ ವಿಮಾನ ಸಾರಿಗೆ ಸಂಸ್ಥೆ ಈ ವಿಮಾನ ಯಾನದ ಬಗ್ಗೆ ಒಪ್ಪಂದ ಮಾಡಿಕೊಂಡಿವೆ. ಈ ಒಪ್ಪಂದದಂತೆ ವಾರಕ್ಕೆ ಎರಡು ಬಾರಿ ವಿಮಾನವು ಸಂಚರಿಸುತ್ತದೆ.

ಈ ವಿಮಾನ ಸಾರಿಗೆ ಸಂಪರ್ಕವು ಭಾರತ-ರಷ್ಯ ಸ್ನೇಹ ಸಂಬಂಧದಲ್ಲಿ ಮಹತ್ವವಾದ ಹೆಜ್ಜೆಯಾಗಿದೆ. ಹೆಚ್ಚು ಮಂದಿ ಪ್ರವಾಸಿಗರು, ಇತರರೂ ಕಡಿಮೆ ಖರ್ಚಿನಲ್ಲಿ, ಕಡಿಮೆ ಕಾಲದಲ್ಲಿ ಹೋಗಿಬರಬಹುದಾಗಿದೆ.

## ಪಾಕೀಸ್ತಾನಿ ಸೈನಿಕರಿಂದ ಗೋಳೀಬಾರು

ಕಳೆದ ಕೆಲವು ವಾರಗಳಿಂದ ಪಾಕೀಸ್ತಾನದ ಗಡಿ ಪ್ರದೇಶದಲ್ಲಿರುವ ಸೈನಿಕರು ಭಾರತದ ಗಡಿ ಪ್ರದೇಶದಲ್ಲಿರುವ ಗ್ರಾಮಗಳ ಮೇಲೆ ಗುಂಡಿನ ಸುರಿಮಳೆ ನಡೆಸುತ್ತಿದ್ದಾರೆ. ಅಸ್ಸಾಮಿನ ಗಡಿ ಪ್ರದೇಶದಲ್ಲಿ ಕೆಲ ಗ್ರಾಮಗಳನ್ನೂ ಆಕ್ರಮಿಸಿಕೊಂಡಿದ್ದಾರೆ. ಪಾಕೀಸ್ತಾನಿ ಪಡೆಗಳ ಈ ಕೃತ್ಯ ತೀವ್ರ ಕಳವಳವುಂಟುಮಾಡಿದೆ. ಭಾರತ—ಪಾಕೀಸ್ತಾನ ಗಡಿ ವಿವಾದವು ಇನ್ನೂ ಸಮರ್ಪಕವಾಗಿ ಇತ್ಯರ್ಥವಾಗಿರದಿದ್ದರೂ, ತಾತ್ಕಾಲಿಕವಾದ ಒಪ್ಪಂದವಾಗಿದೆ. ಪಾಕೀಸ್ತಾನಿ ಪಡೆಗಳು ಇದನ್ನು ಉಲ್ಲಂಘಿಸಿ, ಪ್ರಚೋದಕರ ಕೃತ್ಯದಲ್ಲಿ ತೊಡಗಿರುವುದು ಖಂಡನೀಯವಾಗಿದೆ.

ಪಾಕೀಸ್ತಾನ ಸರಕಾರವು ಗಡಿ ಪ್ರದೇಶದಲ್ಲಿ ನಡೆಯುತ್ತಿರುವ ಈ ಘಟನೆಗಳ ಬಗ್ಗೆ ಚಕಾರವೆತ್ತಿಲ್ಲ. ಭಾರತ ಸರಕಾರ ತನ್ನ ಪ್ರತಿಭಟನೆಯನ್ನು ಸೂಚಿಸಿದೆ.

ಭಾರತದ ಪ್ರಧಾನಿ ನೆಹರೂರವರನ್ನು ಈ ಪ್ರಶ್ನೆಯ ಇತ್ಯರ್ಥವಾಗಿ ಭೆಟ್ಟಿಯಾಗಲು ಪಾಕೀಸ್ತಾನ ಪ್ರಧಾನಿ ಫಿರೋಜ್ ಖಾನ್‌ನೂನ್‌ರವರು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ನೆಹರೂರವರು ಇದಕ್ಕೆ ತಮ್ಮ ಅಭ್ಯಂತರವೇನಿಲ್ಲವೆಂದೂ, ಭೆಟ್ಟಿಯು ನವದೆಹಲಿಯಲ್ಲಿ ನಡೆಯಬೇಕೆಂದೂ ಸೂಚಿಸಿದ್ದಾರೆ. ಆರಂಭದಲ್ಲಿ ವಿದೇಶಾಂಗ ಕಾರ್ಯದರ್ಶಿಗಳ ಮಟ್ಟದಲ್ಲಿ ಸಭೆ ಜರುಗಿ ನಂತರದಲ್ಲಿ ಪ್ರಧಾನಿಗಳ ಭೆಟ್ಟಿಯಾಗಲಿ. ಭೇಟಿಯು ಸೆಪ್ಟಂಬರ್ ತಿಂಗಳಲ್ಲಿ ನಡೆಯಲಿದೆ. ಇದು ಸ್ವಾಗತಾರ್ಹವಾಗಿದೆ. ಪ್ರಧಾನಿಗಳ ಈ ಸಮಾವೇಶದಿಂದಾಗಿ ಮುಂದೆ ಇಂಥ ಅನಿರೀಕ್ಷಿತ ಘಟನೆಗಳು ಸಂಭವಿಸದಿರಲೆಂದು ಆಶಿಸುತ್ತೇವೆ.

## ವಿಶ್ವಸಂಸ್ಥೆಯಲ್ಲಿ ಪಶ್ಚಿಮ ಏಷ್ಯಾ ಪ್ರಶ್ನೆ

ಕಳೆದ ಒಂದು ವಾರದಿಂದ ವಿಶ್ವಸಂಸ್ಥೆಯ ಮಹಾ ಸಭೆಯಲ್ಲಿ ಪಶ್ಚಿಮ ಏಷ್ಯ ಪ್ರಶ್ನೆಯು ಚರ್ಚೆಯಾಗುತ್ತಿದೆ. ಅಧ್ಯಕ್ಷ ಐಸನ್ ಹೋವರ್‌ರವರು ಮಹಾಸಭೆಯನ್ನುದ್ದೇಶಿಸಿ ಮಾತನಾಡುತ್ತ ಪಶ್ಚಿಮ ಏಷ್ಯದಲ್ಲಿ ಶಾಂತಿಕಾಪಾಡಲು 6 ಅಂಶಗಳ ಯೋಜನೆಯನ್ನು ಮುಂಡಿಸಿದ್ದಾರೆ. ಅವರ ಈ ಯೋಜನೆಯಲ್ಲಿ ವಿಶ್ವ ಸಂಸ್ಥೆಯ ಪೋಲೀಸುಪಡೆ ಇರಬೇಕೆಂದು ಸೂಚಿಸಿದ್ದಾರೆ.

ಇರಾಕ್‌ನಲ್ಲಿ ಜನಪ್ರಿಯ ಕ್ರಾಂತಿಯಾದನಂತರ ಲೆಬನಾನ್ ಮತ್ತು ಜೋರ್ಡಾನುಗಳಲ್ಲಿ ಬಂದಿಳಿದಿರುವ ಅಮೇರಿಕಾ ಬ್ರಿಟನ್ ಪಡೆಗಳು, ಅರಬ್ ರಾಷ್ಟ್ರೀಯತೆಯನ್ನು ತುಳಿದು, ತಮ್ಮ ನೆಲೆ ಸ್ಥಾಪಿಸಲು ನಡೆಸಿರುವ ಯತ್ನ ಎಲ್ಲರಿಗೂ ತಿಳಿದಿದೆ. ಅಮೇರಿಕ-ಬ್ರಿಟನ್ ಸೇನೆಗಳು ಕೂಡಲೇ ಅಲ್ಲಿಂದ ಕಾಲ್ತೆಗೆಯಬೇಕೆಂಬುದು ಎಲ್ಲ ಪ್ರಜಾಪ್ರಭುತ್ವ ಹಾಗೂ ಶಾಂತಿ ಪ್ರೇಮಿ ಜನತೆಯ ರಾಷ್ಟ್ರಗಳ ಬೇಡಿಕೆಯಾಗಿದೆ. ಸೋವಿಯತ್ ಯೂನಿಯನ್ ಈ ಬಗ್ಗೆ ಈವರೆಗೆ ಅನೇಕ ಸಲಹೆಗಳನ್ನು ಮುಂಡಿಸಿದೆ.

ಶೃಂಗ ಸಮ್ಮೇಳನವೊಂದು ಜರುಗಿ, ಅದರ ಮೂಲಕ ಪ್ರಶ್ನೆಯನ್ನು ಬಗೆಹರಿಸುವ ಬದಲು ಈಗ ಪ್ರಶ್ನೆಯು ವಿಶ್ವಸಂಸ್ಥೆಯ ಮಹಾಸಭೆಯ ಮುಂದಿದೆ. ಮಹಾಸಭೆಯು ಅಮೇರಿಕ ಬ್ರಿಟನ್ ಸೇನೆಗಳು ವಾಪಸಾಗಬೇಕೆಂದು ತಿರ್ಮಾನಿಸಿದಲ್ಲಿ ಹಾಗೆ ಮಾಡಲು ಸಿದ್ಧವೆಂದು ಅಮೇರಿಕ ಬ್ರಿಟನ್‌ಗಳು ಘೋಷಿಸಿವೆ. ಆರಂಭದಲ್ಲಿ ಲೆಬನಾನ್ ಸರಕಾರ ಹೇಳಿದಲ್ಲಿ ತಾವು ಹಿಂತಿರುಗುವುದಾಗಿ ಹೇಳಿದ್ದ, ಅಮೇರಿಕ ಈಗ ಲೆಬನಾನ್ ಅಧ್ಯಕ್ಷರು ಚುನಾಯಿತರಾದ ಕೂಡಲೇ ವಿದೇಶೀ ಸೇನೆಗಳು ವಾಪಸ್ಸಾಗಬೇಕೆಂದು ಘೋಷಿಸಿದರೂ, ಅಮೇರಿಕ ಅದನ್ನು ತಿರಸ್ಕರಿಸಿದೆ. ಈಗ ವಿಶ್ವಸಂಸ್ಥೆಯ ಮುಂದೆ ವಿಶ್ವಸಂಸ್ಥೆಯ ಪೋಲೀಸುಪಡೆ ಏರ್ಪಡಿಸಬೇಕೆನ್ನುವ ಸಲಹೆ ಮುಂಡಿಸಿರುವುದು ಖಂಡನೀಯವಾಗಿದೆ.

ಪ್ರಧಾನಿ ನೆಹರೂರವರು ವಿಶ್ವಸಂಸ್ಥೆಯ ಪೋಲೀಸು ಪಡೆಯನ್ನಾಗಲೀ ಬೇರೆ ಯಾವುದೇ ರೀತಿಯ ಕ್ರಮವನ್ನಾಗಲೀ ವಿರೋಧಿಸಿದ್ದಾರೆ. ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಗಳು ಭಾರತ ಸರಕಾರದ ನಿಲುವೆಯನ್ನು ಸ್ಪಷ್ಟಗೊಳಿಸಿದ್ದಾರೆ.

ಅಮೇರಿಕ-ಬ್ರಿಟನ್ ಸಾಮ್ರಾಜ್ಯವಾದಿಗಳು ಬೆಳೆಯುತ್ತಿರುವ ಅರಬ್ ರಾಷ್ಟ್ರೀಯತೆಯನ್ನು ಹೇಗಾದರೂ ತುಳಿಯಲು ಯತ್ನಿಸುತ್ತಿವೆ. ವಿಶ್ವ ಸಂಸ್ಥೆಯನ್ನು ತಮ್ಮ ಹೀನ ಕೃತ್ಯಕ್ಕಾಗಿ ಬಳಸಿಕೊಳ್ಳಲು ಅವು ಯತ್ನಿಸುತ್ತಿದೆ.

ಅಮೇರಿಕ-ಬ್ರಿಟನ್ ಸೇನೆಗಳು ಕೂಡಲೇ ಲೆಬನಾನ್-ಜೋರ್ಡಾನುಗಳಿಂದ ವಾಪಸಾಗಬೇಕೆಂದು ಒತ್ತಾಯ ಪೂರ್ವಕವಾದ ಚಳವಳಿ ನಡೆಸಬೇಕಿದೆ. ಆಕ್ರಮಣಕಾರೀ ಶಕ್ತಿಗಳು ಆಕ್ರಮಣ ನಡೆಸಿ, ಅಲ್ಲಿಂದ ಹಿಂತೆಗೆಯಲು ಮುಂದಿರುಸುತ್ತಿರುವ ಷರತ್ತುಗಳು ಖಂಡನೀಯವಾಗಿವೆ. ವಿಶ್ವಶಾಂತಿ ಹಾಗೂ ಮಧ್ಯಪ್ರಾಚ್ಯದಲ್ಲಿ ಶಾಂತಿ ಮತ್ತು ಅರಬ್ ರಾಷ್ಟ್ರೀಯತೆಯ ರಕ್ಷಣೆಗಾಗಿ ವಿಶ್ವ ಸಂಸ್ಥೆಯ ಮಹಾಸಭೆಯು ಸೂಕ್ತ ತೀರ್ಮಾನ ಕೈಗೊಳ್ಳುವುದೇ ಎಂದು ನೋಡಬೇಕಿದೆ.

---

## ಕೇರಳದ ವಿಚಾರಣೆ ಅರ್ಥವಿಲ್ಲದ ಮಾತು

(೫ನೇ ಪುಟದಿಂದ)

### ಪಿ. ಎಸ್. ಪಿ. ವರ್ತನೆ

ಪಿ.ಎಸ್.ಪಿ. ವರ್ತನೆಯ ಬಗ್ಗೆ ಮಾತನಾಡುತ್ತ ಕಮ್ಯೂನಿಸ್ಟ್ ನಾಯಕರು ಹೀಗೆ ಹೇಳಿದರು:

"ಪಿ. ಎಸ್. ಪಿ. ಯವರು ಈ ರಾಜ್ಯದಲ್ಲಿ ನಡೆಸುತ್ತಿರುವ ಚಟುವಟಿಕೆಗಳು, ಹೊರಗಡೆಯಿಂದ ಅವರು ಪಡೆಯುತ್ತಿರುವ ಬೆಂಬಲ ಏನೇ ಇದ್ದರೂ ಅವರನ್ನನುಸರಿಸಿದ ಜನತೆ ಮತ್ತು ಸದಸ್ಯ ಜನ ಸಮಾಜವಾದಿ ಮನೋಭಾವದವರೂ ವಾಮವಿಚಾರ ಧಾರೆಯವರೂ ಆಗಿದ್ದಾರೆಂಬ ವಸ್ತುಸ್ಥಿತಿ ಹಾಗೇ ಉಳಿಯುತ್ತದೆ. ಕಮ್ಯೂನಿಸ್ಟ್ ವಿರೋಧದಿಂದ ಕುರುಡರಾದ ಅವರು ಮಾಡುತ್ತಿರುವ ಗಂಭೀರವಾದ ತಪ್ಪುಗಳು ಕಾಂಗ್ರೆಸ್ಸಿಗೂ ಮತ್ತು ಪಟ್ಟಭದ್ರ ಹಿತಗಳವರಿಗೂ ನೆರವಾಗುತ್ತಿವೆ ಎಂಬುದನ್ನು ನಾವು ಹೇಳುತ್ತೇವೆ."

ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಕಾರ್ಯಕಾರಿ ಸಮಿತಿಯು ಕೇರಳ ಪಾರ್ಟಿ ಸಮಿತಿಗೂ ಸಚಿವ ಸಂಪುಟಕ್ಕೂ ಕೆಲವು ನಿರ್ದೇಶನಗಳನ್ನಿತ್ತಿದ್ದು ಇವುಗಳನ್ನು ಅವರು ಇಷ್ಟರಲ್ಲೇ ಚರ್ಚಿಸುತ್ತಾರೆಂಬ ಸಂಗತಿಯನ್ನು ಶ್ರೀ ಘೋಷ್ ಪ್ರಕಟಿಸಿದರು.



---

## ಕೇರಳ ಮನವಿ

(೪ನೇ ಪುಟದಿಂದ)

ವಿದ್ಯಾರ್ಥಿ ಮುಷ್ಕರ ಮುಗಿದಿದೆ. ಗೇರುಬೀಜ ಕಾರ್ಖಾನೆಯ ಕೆಲಸಗಾರರೆಲ್ಲ ತಮ್ಮ ತಮ್ಮ ಕೆಲಸಗಳಿಗೆ ವಾಪಸಾಗಿದ್ದಾರೆ. ತ್ರಿಚೂರಿನಲ್ಲಿಯ ಗಿರಣೀ ವಿವಾದ ಇತ್ಯರ್ಥವಾಗಿದೆ. ಇನ್ನು ಮುಂದೆ ಏನು ಮಾಡಬೇಕೆಂಬುದೇ ಈಗಿನ ನಮ್ಮ ಮುಖ್ಯ ಸಮಸ್ಯೆಯಾಗಿದೆ. ನಮ್ಮನ್ನೂ ಪರಿಸ್ಥಿತಿಯನ್ನೂ ರಕ್ಷಿಸಲು ನಾವು ಅವಿರೋಧವಾಗಿ ಒಪ್ಪಂದಕ್ಕೆ ಬಂದು ಈ ಕೆಲವೊಂದು ಆಗತ್ಯಗಳನ್ನು ತಮ್ಮ ಮುಂದಿಡುತ್ತೇನೆ:

ಲಕ್ನೋ ವಿಶ್ವವಿದ್ಯಾನಿಲಯವನ್ನು ಅದರೆಲ್ಲ ಸಮಸ್ಯೆಗಳೊಂದಿಗೇ ಇಲ್ಲಿಗೆ ವರ್ಗಾಯಿಸಿ, ಅಂದರೆ ನಾವು ಹೋರಾಟವನ್ನು ಮುಂದೊರೆಸುತ್ತೇವೆ ಮತ್ತು ಕಮ್ಯೂನಿಸ್ಟ್ ಸರಕಾರದಿಂದಲೇ ಗೋಲೀಬಾರ್ ಆಗುವುದೇ ವಿನಃ ಕಾಂಗ್ರೆಸ್ಸಿಗರಿಂದಲ್ಲ.

ಸಂಯುಕ್ತ ಪ್ರಾಂತ್ಯದಲ್ಲಿಯ ತೀವ್ರ ಆಹಾರಾಭಾವದ ಸ್ಥಿತಿಯ ಕಡೆಗೆ ಸರಕಾರದ ಗಮನವನ್ನು ಸೆಳೆಯಲು ಆಂದೋಳನವೊಂದು ನಡೆಯಲಿದೆಯಷ್ಟೆ, ಈ ಆಹಾರಾಭಾವವನ್ನು ಕೇರಳಕ್ಕೆ ವರ್ಗಾಯಿಸಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ಜಯಪೂರನಲ್ಲಿ ನಡೆದ ಹೈಕೋರ್ಟ್ ಆಂದೋಳನ ಸುಮ್ಮನೆ ವ್ಯರ್ಥವಾಯಿತು. ಇದನ್ನು ಕೂಡ ಶ್ರೀ ರಾಜಬಹದ್ದೂರರೊಂದಿಗೇನೇ ಕೇರಳಕ್ಕೆ ವರ್ಗಾಯಿಸಬಹುದು.

ರಾಮನಾಥಪುರದ ಥೇವಾರ್‌ಗಳೂ ಹರಿಜನರೂ ಸಮ್ಮವರಾಗಿ ನಮ್ಮಲ್ಲಿಗೆ ಬರುವುದು ನಮಗೆ ತುಂಬಾ ಹಿಡಿಸುತ್ತದೆ. ಮದರಾಸು ಸರ್ಕಾರವೂ ಕೂಡ ಇವರೊಂದಿಗೆ ಪಾಲ್ಗೊಳ್ಳಬೇಕೆಂದು ಬಲವಂತಪಡಿಸಬೇಕು.

ಪಂಜಾಬ್‌ನಲ್ಲಿ ನಡೆದಿರುವ ಹಿಂದೀ ಆಂದೋಳನವನ್ನು ಕೇರಳದಲ್ಲಿ ತಕ್ಷಣವೇ ಬೇರೂರಿಸಬೇಕು.

ಕಲಕತ್ತೆಯಲ್ಲಿರುವ ಸೀಲ್ದಾ ಸ್ಟೇಷನ್ನಿನಿಂದ ನಿರಾಶ್ರಿತರಿಗೆಲ್ಲ ಕೂಡಲೆ ತ್ರಿವೇಂದ್ರಮ್‌ನಲ್ಲಿ ಪುನರ್ವ್ಯವಸ್ಥೆ ಮಾಡಬೇಕು.

ಈಗಿನ ಪರಿಸ್ಥಿತಿಯನ್ನೆದುರಿಸಲು ಇವು ನಮ್ಮ ಕನಿಷ್ಠ ಬೇಡಿಕೆಗಳು ಮತ್ತು ನಮ್ಮ ಕದನಗಳಿಂದ ಖಾಲಿಯಾದ ಜಾಗವನ್ನು ತುಂಬಲು ಸಾಕು.

ಸಮಾಜ ವಿರೋಧಿ ಈ ಸರ್ಕಾರವನ್ನು ಬುಡಮೇಲು ಮಾಡುವ ಇನ್ನೊಂದು ತುರ್ತು ಆಜ್ಞೆಯನ್ನು ಹೊರಡಿಸಿ. ನಾವು ಮುಂದೆ ಕೈಕೊಳ್ಳಬಹುದಾದ ಹೋರಾಟಗಳನ್ನು ತಡೆಯಬೇಕು. ಇದೊಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ, ಕಾನೂನು, ವ್ಯವಸ್ಥೆಗಳಿಗೆ, ನಮ್ಮ ಭವ್ಯಪರಂಪರೆಗೆ ಮಹಾತ್ಮಾ ಗಾಂಧಿಯವರಿಗೆ ದೊಡ್ಡ ಆಕ್ರಿಯಾಗುತ್ತದೆ.

ಕೊನೆಯದಾಗಿ ನಾವು ಕೇಂದ್ರ ಸರಕಾರವು ಕೇಳಪ್ಪನ್‌ರವರ ಹೇಳಿಕೆಯನ್ನು ಉಪೇಕ್ಷಿಸಿ ಬಿಡಬೇಕೆಂದೂ ಕೇಳಿಕೊಳ್ಳುತ್ತೇವೆ.

["ಶಂಕರ್ಸ್ ವೀಕ್ಲಿ" ಸೌಜನ್ಯ]

# ಪ್ರಪಂಚದಲ್ಲೇ ಅತ್ಯಂತ ಬಲಿಷ್ಠ ರಾಷ್ಟ್ರ ರಷ್ಯಾ

## ಶ್ರೀ ಕೆಂಗಲ್ ಹನುಮಂತಯ್ಯನವರ ಅಭಿಪ್ರಾಯ

ಬೆಂಗಳೂರಿನ ಲಾ ಕಾಲೇಜಿನ ಯುವಕ ವಾಗ್ಮಿಗಳ ಸಂಘವು ತಾ॥ ೧೩—೮—೫೮ ರಂದು ಲಾ ಕಾಲೇಜಿನಲ್ಲಿ ಶ್ರೀ ಪಿ. ಶಿವಶಂಕರನ್‌ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾಜೀ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು ಮಾತನಾಡುತ್ತ "ಸೋವಿಯತ್ ರಷ್ಯವು ಪ್ರಪಂಚದಲ್ಲೇ ಪ್ರಬಲವಾದ ರಾಷ್ಟ್ರವಾಗಿದೆ. ಅದರ ವಿದ್ಯಾಭ್ಯಾಸಪದ್ಧತಿ ಅನುಪಮೇಯವಾದುದು, ವೈಜ್ಞಾನಿಕ ಸಾಧನೆಗಳು ವಿಸ್ಮಯಕಾರಿಯಾದುವು" ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀ ಕೆಂಗಲ್ಲರು ಸ್ಟಾಕ್‌ಹೋಂ ಶಾಂತಿ ಸಮ್ಮೇಲನಕ್ಕೆ ತೆರಳಿದ್ದವರು ಹಾಗೇ ಪ್ರಪಂಚದ ಬಲಿಷ್ಠ ಕಮ್ಯೂನಿಸ್ಟ್ ರಾಷ್ಟ್ರದವಾದ ಸೋವಿಯತ್ ರಷ್ಯದಲ್ಲಿ ಸಂಚರಿಸಿ ಇದೀಗ ತಾನೆ ಮರಳಿದ್ದರು. ಕಮ್ಯೂನಿಸಂನ್ನು ಕಟುವಾಗಿ ಟೀಕಿಸುತ್ತಿದ್ದ ಶ್ರೀಯುತರು ಕಮ್ಯೂನಿಸ್ಟ್ ಸಾಧನೆಗಳನ್ನು ಮನವಾರೆ ಮೆಚ್ಚಿಕೊಂಡು ಚೀನಾ ಪ್ರವಾಸದ ಬಳಿಕ ತಮ್ಮ ರಾಜಕೀಯ ನಿಲುಮೆಯನ್ನು ಇನ್ನೂ ಸ್ಪಷ್ಟಗೊಳಿಸುವುದಾಗಿ ಹೇಳಿದರು.

ಕೇವಲ ಯಾತ್ರಾರ್ಥಿಯಾಗಿ ಹೋಗಿದ್ದ ತಾವು ಕಣ್ಣಾರೆ ಕಂಡುದನ್ನು ಅವರು ಹೀಗೆ ಹೇಳಿದರು.

ರಷ್ಯ ಸಾಧಿಸಿರುವ ಅಗಾಧ ಪ್ರಗತಿಯನ್ನು ಕಂಡು ಎಂಥವರೂ ಚಕಿತರಾಗಬಹುದು. ರಷ್ಯಾದ ಸಾಧನೆಗಳನ್ನು ಅಮೆರಿಕೆಯು ಕೂಡ ಒಪ್ಪಿಕೊಂಡಿದೆ, ಮೆಚ್ಚಿಕೊಂಡಿದೆ.

ಮೂರನೆಯ ಮಹಾ ಯುದ್ಧದ ಮಾತುಗಳು ಕೇಳಿಬರುತ್ತಿರುತ್ತಿವೆ. ಆದರೆ ಮೂರನೆಯ ಮಹಾ ಯುದ್ಧವಾಗದು. ಇನ್ನು ಹಿಂದಿನಂತೆ ಧಾರ್ಮಿಕ ಅಥವಾ ರಾಷ್ಟ್ರರಾಷ್ಟ್ರಗಳ ಕದನವಿಲ್ಲ. ಈಗ ಬಂದಿರುವದು ಆರ್ಥಿಕಸ್ಪರ್ಧೆ. ಎರಡು ಸಮಾಜ ಪದ್ಧತಿಗಳ ಅಳಿವು ಉಳಿವುಗಳ ಸ್ಪರ್ಧೆ, ಈ ಎರಡು ಸಾಮಾಜಿಕ ಪದ್ಧತಿಗಳ ರಕ್ಷಣೆಗಾಗಿ ನಡೆಯುವ ಕಲಹ ತೋರಬಹುದುದಷ್ಟೆ.

ಪ್ರಪಂಚ ಇಂದು ಎರಡು ಪಾಳೆಯಗಳಲ್ಲಿ ಸೇರಿದೆ. ರಷ್ಯದ ಸಾಮಾಜಿಕ ಪದ್ಧತಿಗೆ ಒಲಿದು ಹಾಗೂ ಅದನ್ನು ಅಂಗೀಕರಿಸಿದ ಅಥವಾ ಅದರ ಪರವಾಗಿರುವ ಶಿಬಿರವೊಂದು. ಅಮೆರಿಕೆಯು ವಹಿಸಿ ನಿಂತಿರುವ ಸಾಮಾಜಿಕ ಪದ್ಧತಿಯ ಶಿಬಿರ ಇನ್ನೊಂದು. ಪ್ರಪಂಚದ ಒಟ್ಟು 220 ಕೋಟಿ ಜನತೆಯಲ್ಲಿ ಸುಮಾರು 100 ಕೋಟಿ ಜನ ರಷ್ಯದ ಶಿಬಿರದಲ್ಲಿದೆ, ಅಮೆರಿಕೆಯ ಪಾಳೆಯದಲ್ಲಿ ಬಹಳೆಂದರೆ 25 ಕೋಟಿ ಜನ ಇರುವರು. ಇನ್ನುಳಿದವರು ತಟಸ್ಥ ರಾಷ್ಟ್ರಗಳಿಗೆ ಸೇರಿದವರು. ಹೀಗೆ ಇಬ್ಭಾಗವಾದ ಪ್ರಪಂಚದಲ್ಲಿ ಈ ಎರಡು ಪದ್ಧತಿಗಳ ಘರ್ಷಣೆಯೇ ಯುದ್ಧ ವಿನಃ ಬೇರೊಂದೇನಿಲ್ಲ.

ರಷ್ಯಾದಲ್ಲಿ ಎಲ್ಲವನ್ನೂ ಸುಯೋಜಿತವಾಗಿ ಕೈಕೊಳ್ಳಲಾಗಿದೆ. ಪ್ರತಿಯೊಂದು ರಂಗದಲ್ಲೂ ನಾವಿದನ್ನು ಕಾಣುತ್ತೇವೆ.

ನಮ್ಮಲ್ಲಿಯಂತೆ ಅಲ್ಲಿ ವಿದ್ಯಾರ್ಥಿಗಳಿಗೆ ನಿರುದ್ಯೋಗದ ಭೀತಿ ಕಾಡಿರುವುದಿಲ್ಲ. ವಿದ್ಯಾಭ್ಯಾಸದ ಬಳಿಕ ಏನು ಎಂಬುದು ನಮ್ಮ ವಿದ್ಯಾರ್ಥಿಗಳ ಪ್ರಶ್ನೆಯಾದರೆ ಅಲ್ಲಿ ವಿದ್ಯಾಭ್ಯಾಸ ಮುಗಿದ ಬಳಿಕ ತಕ್ಷಣವೇ ಅವರಿಗೆ ಕೆಲಸಗಳು ಕಾದುಕೊಂಡಿರುತ್ತವೆ. ಹೀಗೆ ರಷ್ಯಾವು ತನ್ನ ಅಭಿವೃದ್ಧಿ ಕಾರ್ಯಗಳಲ್ಲಿ ಎಂಥವರು ಎಷ್ಟು ಜನ ಬೇಕು ಎಂಬುದನ್ನು ಯೋಜನೆ ಹಾಕಿಕೊಂಡೇ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವುದು.

ಮಾಸ್ಕೋ ವಿಶ್ವವಿದ್ಯಾನಿಲಯ ಮನುಷ್ಯರು ಕಟ್ಟಿದ ಕಟ್ಟಡಗಳಲ್ಲೇ ಅಬ್ಭುತವಾದುದಾಗಿದೆ. 100 ವಿಧಾನಸೌಧಗಳನ್ನು ಒಂದೆಡೆ ಸೇರಿಸಿ ನೋಡಿದರೆ ಈ ಕಟ್ಟಡದ ಕಲ್ಪನೆ ಬರಬಹುದು. ಇದಕ್ಕೆ 40 ಅಂತಸ್ತುಗಳಿದ್ದು ಅದರ ಮೇಲೆ 100 ಅಡಿ ಎತ್ತರದ ಗೋಪುರವೂ ಅದರ ಮೇಲೆ 50 ಅಡಿ ಎತ್ತರದ ಸ್ತ್ಪಾಯರೂ ಇದೆ. ಇದರಲ್ಲಿ 67 ಸಹಸ್ರ ಜನ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇದು ಕೇವಲ ಗಾತ್ರದಲ್ಲೂ ಸಂಖ್ಯೆಯಲ್ಲೂ ದೊಡ್ಡದಾಗಿಲ್ಲ. ಅಲ್ಲಿ ಕಲಿಸತಕ್ಕ ಪಾಠಗಳೂ ವಿಧಾನಗಳೂ ಕೂಡ ದೊಡ್ಡವು. ಸ್ಪೂತ್ನಿಕನ್ನು ಸೃಷ್ಟಿಸಿದ ಮೆದುಳು ಇದೇ ವಿಶ್ವವಿದ್ಯಾನಿಲಯದ್ದು.

ಅಮೇರಿಕೆಯು ಸ್ವತಃ ಈ ಮೂರು ವಿಷಯಗಳನ್ನು ಒಪ್ಪಿಕೊಂಡಿದೆ.

1) ಅಮೇರಿಕೆಯ ವಿದ್ಯಾಧಿಕಾರಿಗಳು ರಷ್ಯದ ವಿದ್ಯಾಭ್ಯಾಸ ಪದ್ಧತಿಯನ್ನು ಪರಿಶೀಲಿಸಿ ಅಮೇರಿಕೆಯ ಪದ್ಧತಿಗಿಂತಲೂ ಇದು ಶ್ರೇಷ್ಠವಾಗಿದೆ ಎಂದು ಹೇಳಿದ್ದಾರೆ.

2) ವೈಜ್ಞಾನಿಕ ಪ್ರಗತಿಯಲ್ಲೂ ರಷ್ಯನ್ನರೇ ಮುಂದೆ. ಅವರು ಸ್ಪೂತ್ನಿಕನ್ನು ಗಗನ ಮಂಡಲಕ್ಕೆ ತೂರಿಬಿಟ್ಟಾಗ ಅಮೇರಿಕೆಯವರ ಅಂತರ್ ಖಂಡಾಂತರ ಕ್ಷಿಪಣಿ ರಚನೆ ಇನ್ನೂ ಪೂರ್ಣವಾಗಿರಲಿಲ್ಲ.

3) ಆಟ—ಪಾಟ ಕ್ರೀಡೆಗಳಲ್ಲೂ ರಷ್ಯನ್ನರೇ ಮುಂದು. ಇತ್ತೀಚಿಗಿನ ಸ್ಪರ್ಧೆಗಳಲ್ಲಿ ಅವರೇ ಮೇಲುಮಟ್ಟದ ಸ್ಥಾನಗಳನ್ನು ಪಡೆದಿದ್ದಾರೆ.

ಈ ಮೂರನ್ನು ಗಮನಿಸಿದಾಗ ರಷ್ಯನ್ನರ ವಿದ್ಯಾಭ್ಯಾಸ ಪದ್ಧತಿಯು ಬೌದ್ಧಿಕ, ದೈಹಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಎಷ್ಟು ಮುಂದೊರೆದಿದೆ ಎಂಬುದು ಗೊತ್ತಾಗುತ್ತದೆ.

---

## ನೀವೇನು ಹೇಳುತ್ತೀರಿ ?

(೫ನೇ ಪುಟದಿಂದ)

ಲ್ಲೂರಿನಲ್ಲಿ ಹಿಂದುಳಿದ ವರ್ಗಗಳವರ ಸಭೆಯಲ್ಲಿ ಮಾತನಾಡುತ್ತ ಜಾತೀಯ ಪದ್ಧತಿಯನ್ನು ತೊಲಗಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಲಾಗಿಲ್ಲವೆಂದು ಆರೋಪಿಸಿದರು. **"ಈ ಅನ್ಯಾಯದ ವಿರುದ್ಧ ಜನತೆ ರಷ್ಯಾ—ಚೀನಾಗಳಲ್ಲಿಯಂತೆ ಬಂಡಾಯವೆದ್ದರೆ ಆಶ್ಚರ್ಯವೇನಿಲ್ಲ"** ಎಂದೂ ಅವರು ಘೋಷಿಸಿದರು.

ಇದೂ ಅಯುದ್ಧದ ಮಾತೆಂದು ಯಾರು ತಾನೆ ಹೇಳಿಯಾರು ?

o o o

ದೇವರ ಮತ್ತು ಸರಕಾರದ ಕಾರ್ಯಗಳು ರಹಸ್ಯವಾದವು. ದುರ್ಭೇದ್ಯವಾದವು, ಬಿಡಿಸಲಾಗದ ಒಗಟುಗಳು ಎಂದು ಹೇಳುವುದು ಒಂದು ಮಾತು.

ನಿಜ. ಹಾಗಿಲ್ಲದಿದ್ದರೆ ನೋಡಿ ನವಥಾದಲ್ಲಿ ಭಿಕ್ಷುಕನೊಬ್ಬ, 35 ವರುಷದವನು, ಹಸಿವಿನಿಂದ ಸತ್ತ. ಅವನ ಅಂತ್ಯಕ್ರಿಯೆಗಳು ಸರಕಾರದ ವೆಚ್ಚದಲ್ಲಿ ನಡೆದುವು. ಈ ಅಂತ್ಯ ಕ್ರಿಯೆಗೆ ಕನಿಷ್ಠ ಪಕ್ಷ ಸುಮಾರು ೨೦—೨೫ ರೂಪಾಯಿಗಳು ವೆಚ್ಚವಾಗಿರಬಹುದು. ಈ ಹಣ ಅವನನ್ನು ಸುಮಾರು ಒಂದು ತಿಂಗಳ ವರೆಗೆ ಅನ್ನ ನೀಡಿ ಬದುಕಿಸುವುದು ಸಾಧ್ಯವಿತ್ತು.

ಆದರೆ ಸತ್ತವರನ್ನು ಸ್ಮಶಾನಕ್ಕೆ ಕಳುಹಿಸಿ ಋಣಮುಕ್ತವಾಗಲು (!) ಸರಕಾರದ ಬಳಿ ಹಣ ಇದೆ, ಆದರೆ ಜೀವಿಸಿದ್ದವರಿಗಾಗಿ ಅನ್ನ ನೀಡಲು ಹಣ ಇಲ್ಲ !

ಅಲ್ಲವೇ ? ಏನಂತೀರಿ ?

—ಪ್ರಶ್ನಾರ್ಥಿ

---

# ಕೇರಳ ಮುಖ್ಯ ಮಂತ್ರಿಯವರ ಧೀರ ಘೋಷಣೆ

[ ಮೊದಲನೆ ಪುಟದಿಂದ ]

ಸ್ ನಾಯಕತ್ವ ಸರಕಾರವನ್ನುರುಳಿಸಲು ಒಂದೇ ಸಮನೆ ಉದ್ರೇಕಕಾರಕ ಆಂದೋಳನದಲ್ಲಿ ತೊಡಗಿದೆ. ಅಧಿಕಾರವನ್ನು ವಹಿಸಿಕೊಂಡಾಗಲೇ ಈ ಜನ ಅಭದ್ರ ಪರಿಸ್ಥಿತಿ, ಆಸ್ತಿ ಪಾಸ್ತಿಗೆ ಧಕ್ಕೆ ಎಂದು ಕೂಗಲಾರಂಭಿಸಿದರು.

"ಈಗ ಹದಿನಾರು ತಿಂಗಳುಗಳ ಹಿಂದೆ ಇವರು ಎತ್ತಿದ ಆರೋಪಗಳಿಗೂ ಈಗ ಎತ್ತಿದ ಆರೋಪಗಳಿಗೂ ವ್ಯತ್ಯಾಸವಿದೆ. ಮೂಲಭೂತವಾಗಿ ಈ ಅಪಾದನೆಗಳು ಒಂದೇ ಆಗಿದ್ದರೂ ಆಗ ಕಾಂಗ್ರೆಸ್ಸು ಅಧಿಕೃತ ನಿಲುವನ್ನು ತೆಗೆದುಕೊಳ್ಳದಿದ್ದರೂ ಅಖಿಲ ಭಾರತ ಕಾಂಗ್ರೆಸ್ ನಾಯಕತ್ವ ಮತ್ತು ಶ್ರೀಮನ್ನಾರಾಯಣರಂಥವರು ಈಗ ಕೆ.ಪಿ.ಸಿ.ಸಿ. ಪರವಾಗಿ ನಿಲುವನ್ನು ತಳೆದಿದ್ದಾರೆ. ಆದರೆ ಇಂದು ಕೆ.ಪಿ.ಸಿ.ಸಿ.ಯ ಮೂವರು ಪ್ರತಿನಿಧಿಗಳ ಮಂಡಳದ ಹೇಳಿಕೆಯಂತೆ ನಿಲುವು ಈಗ ಬದಲಾಯಿಸಿದಂತೆ ಕಾಣುತ್ತದೆ. ಈಗ ಕಾಣುತ್ತಿರುವುದೇನಂದರೆ ಕೆ ಪಿ.ಸಿ.ಸಿ.ಯ ದೃಷ್ಟಿಕೋಣವನ್ನು ಹೈಕಮಾಂಡ್ ಕೇರಳ ಪರಿಸ್ಥಿತಿಯ ಬಗ್ಗೆ ಒಪ್ಪಿಕೊಂಡತಿದೆ.

"ಕೇರಳದ ಒಳಗಿನ ಹಾಗೂ ಹೊರಗಿನ ಕಾಂಗ್ರೆಸ್ ನಾಯಕತ್ವವು ಈಗ ಕೇರಳದ ವಿಷಯವನ್ನು ಅಖಿಲ ಭಾರತ ಪ್ರಶ್ನೆಯನ್ನಾಗಿಸಿದೆ. ಈಗ ಕೇರಳದ ಬೆಂಬಲಕ್ಕೆ ಸಂಪೂರ್ಣವಾಗಿ ನಿಲ್ಲುವುದು ಜನತೆಯ ಕರ್ತವ್ಯವ್ಯಾಗಿದೆ. ದಿನನಿತ್ಯದ ಆಡಳಿತೆಯಲ್ಲಿ ಕಮ್ಯೂನಿಸ್ಟ್ ಪಕ್ಷವು ಕೈಹಾಕುತ್ತಿದೆ ಎಂಬ ಅಪಾದನೆಯಲ್ಲಿ ಅರ್ಥವೇನೇನೂ ಇಲ್ಲ.

### ಕೇರಳದಲ್ಲಷ್ಟೇ ಯಾಕೆ ವಿಚಾರಣೆ ?

"ರಾಜ್ಯದಲ್ಲಿ ರಾಜಕೀಯ ವ್ಯಕ್ತಿಗಳ ಬಿಡುಗಡೆ ಮತ್ತು ಮೊಕದ್ದಮೆಗಳ ವಾಪಸಾತಿಯಾಗಿದೆಯಷ್ಟೆ, ಇವರಲ್ಲಿ ಕಮ್ಯೂನಿಸ್ಟರಲ್ಲದವರೇ ಹೆಚ್ಚಾಗಿದ್ದಾರೆ.

"ಕೇರಳ ರಾಜ್ಯದಲ್ಲಷ್ಟೇ ಯಾಕೆ ಈ ವಿಚಾರಣೆ? ದೇಶದ ಬೇರೆ ರಾಜ್ಯಗಳಲ್ಲಿ ಗೊಂದಲಗಳು ಏನೇನೂ ಇಲ್ಲವೇ ಇಲ್ಲವೆ?

"ಬೇರೆ ರಾಜ್ಯಗಳ ಪಕ್ಷ ರಾಜಕಾರಣದ ವಿವರಗಳನ್ನೆಲ್ಲ ನೋಡುವುದು ನನಗೆ ಬೇಕಾಗಿಲ್ಲವಾದರೂ ಕಾಂಗ್ರೆಸ್ ನಾಯಕತ್ವವು ಬೇರೆ ರಾಜ್ಯಗಳಲ್ಲೂ ಕೂಡ ವಿರೋಧ ಪಕ್ಷಗಳು ಮಾಡಿರುವ ಅಪಾದನೆಗಳಿಗಾಗಿ ವಿಚಾರಣೆ ನಡೆಸುವುದೆ ಎಂದು ನಾವು ಕೇಳಿದರೆ ಅದು ಸ್ವಾಭಾವಿಕವೆ."

ಹೀಗೆಂದು ಅನೇಕ ಆಹ್ವಾನಗಳನ್ನು ಕಾಂಗ್ರೆಸ್ಸಿಗೆ ನೀಡಿದ ಶ್ರೀ ಇ.ಎಂ.ಎಸ್.ರು ಸರ್ಕಾರ ಕೈಕೊಳ್ಳುವ ಪ್ರಗತಿಪರ ಕ್ರಮಗಳಿಗೆಲ್ಲ ವಿರೋಧ ಪಕ್ಷಗಳೂ ಜನತೆಯು ಬೆಂಬಲ ನೀಡಬೇಕೆಂದು ಕೇಳಿಕೊಂಡರು.

ಅವರ ನಂತರ ಮಾತನಾಡಿದ ಶ್ರೀ ಪಿ. ಸಿ. ಜೋಷಿಯವರು "ಈ ರಾಜ್ಯದ ನನ್ನ ಸಂಚಾರದಲ್ಲೆಲ್ಲೂ ಅರಾಜಕತೆಯ ಲಕ್ಷಣಗಳು ಎಲ್ಲೆಲ್ಲೂ ಕಾಣಲಿಲ್ಲ. ಕಮ್ಯೂನಿಸ್ಟ್ ಸರ್ಕಾರದೊಂದಿಗೆ ಕಮ್ಯೂನಿಸ್ಟ್‌ವಲ್ಲದ ಸರಕಾರಗಳು ಅಸ್ತಿತ್ವದಲ್ಲಿದ್ದರೆ, ಈ ಪ್ರಯೋಗ ಯಶಸ್ವಿಯಾದರೆ ಪ್ರಪಂಚದ ರಾಜಕೀಯಕ್ಕೆ ಇದೊಂದು ಮಹತ್ತರ ಕಾಣಿಕೆ" ಎಂದು ಹೇಳಿದರು.

---

### ಪೋಲೀಸರಿಗಿಂತ ಹೋಂ ಗಾರ್ಡ್ಸ್‌ನವರೇ ಮೇಲು !

ಬಿಜಾಪುರದಲ್ಲಿ ಪೋಲೀಸ ಖಾತೆಯವರು ಸೆರೆ ಮಾರಾಟಕ್ಕೆ ಪ್ರೋತ್ಸಾಹ ಕೊಡುತ್ತಿರುವಾಗ, ಹೋಂ ಗಾರ್ಡ್ಸರು ಪಾನ ಪ್ರತಿಬಂಧ ಮಾಡಲಿಕ್ಕೆ ಪ್ರಶಂಸನೀಯ ಕೆಲಸ ಮಾಡುತ್ತಿದ್ದಾರೆ ಶ್ರೀ ಗಚ್ಚಿನಕಟ್ಟಿ, ಕಟವಟೆ, ನಾದ ಮೊದಲಾದ ಹೋಂಗಾರ್ಡ್ಸ್ ಅಧಿಕಾರಿಗಳು, ಸೆರೆ ಮಾರಾಟ ಮಾಡುವ ಅಡ್ಡೆಗಳ ಮುಂದೆ ಪಿಕೆಟಿಂಗ್ ನಡೆಸಿ ಎಷ್ಟೋ ಕಡೆಗಳಲ್ಲಿ ದಾರು ಮಾರಾಟವಾಗುವುದನ್ನು ತಡೆದಿರುವರು. ಮುಖ್ಯ ಮಂತ್ರಿ ಶ್ರೀ ಜತ್ತಿಯವರ ಕೈಕೆಳಗಿರುವ ಪೋಲೀಸರು ಸೆರೆ ಮಾಡುವವರಿಂದ "ಲಂಚ" ತಿಂದು ಕಣ್ಣುಮುಚ್ಚಾಲೆಯಾಟ ಆಡುತ್ತಿರುವರು. ಒಬ್ಬ ಎಂ ಎಲ್ ಎ.ಯವರೂ ದಾರು ಮಾರಾಟದಲ್ಲಿ ಪಾಲುಗಾರರಾಗಿದ್ದಾರೆಂದು ಜನರು ಹೇಳುತ್ತಿರುವರು. ಹೋಂ ಗಾರ್ಡ್ಸರ ಪ್ರಶಂಸನೀಯ ಕೆಲಸಕ್ಕೆ ನಾಗರೀಕರು ಸರ್ವ ವಿಧದಿಂದಲೂ ಸಹಾಯಮಾಡಬೇಕೆಂದು ಕಮ್ಯೂನಿಸ್ಟ್‌ಪಾರ್ಟಿ ಕೇಳಿಕೊಳ್ಳುತ್ತದೆ.




REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810